26 September 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನೆಮ್ಮದಿಯ ಜೀವನಕ್ಕೆ
ಒತ್ತಡಗಳು ಆತಂಕಕಾರಿ!
ಹೀಗಾಗಿ ಜೀವನದಲ್ಲಿ
ಶ್ರೀಮಂತಿಕೆಗಿಂತ
ನೆಮ್ಮದಿಯೇ ಬಹಳ ಮುಖ್ಯ!

-ಸ್ನೇಹಾ ಆನಂದ್



ಸರ್ಕಾರಕ್ಕೆ ಕಣ್ಣು ಕಾಣಲ್ಲ ಕಿವಿ ಕೇಳಲ್ಲ, ಹೃದಯ ಇಲ್ಲ — ಪುಟ ಸಂ. 2



ಹಿರಿಯ ನಾಗರಿಕರು ಕ್ರೀಡೆಗಳಲ್ಲಿ ಪಾಲ್ಗೊಳ್ಳಿ — ಪುಟ ಸಂ. 3



ದಸರಾ ದೀಪಾಲಂಕಾರ ಹೊಸತನದಿಂದ ಕೂಡಿರಲಿ: ಇಂಧನ ಸಚಿವ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 281 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ‘2028ಕ್ಕೆ ಡಿಕೆಶಿನೇ ಮುಖ್ಯಮಂತ್ರಿ’

## ನನಗೆ ಇನ್ನೂ ವಯಸ್ಸಿದೆ, ಕಾಯುವೆ: ಸಚಿವ ಸತೀಶ್ ಜಾರಕಿಹೊಳಿ

**ಮೈಸೂರು:** 2028ಕ್ಕೂ ನಾನೇ ಮುಖ್ಯಮಂತ್ರಿ ಆಗುತ್ತೇನೆ ಎಂದು ಡಿ.ಕೆ.ಶಿವಕುಮಾರ್ ಹೇಳುತ್ತಿದ್ದಾರೆ. ಅವರೇ ಸಿಎಂ ಅಗಲಿ, ಸಂತೋಷ. ನನಗೆ ಇನ್ನೂ ವಯಸ್ಸಿದೆ, ಕಾಯುತ್ತೇನೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅಚ್ಚರಿಯ ಹೇಳಿಕೆ ನೀಡಿದ್ದಾರೆ.

ನಗರದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅವಕಾಶ ಸಿಕ್ಕರೆ 2028ಕ್ಕೆ ನಾನೂ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಈ ಹಿಂದೆ ನಾನು ಹೇಳಿದ್ದೆ. ಆದರೆ, ಮುಂಬರುವ ಚುನಾವಣೆಯಲ್ಲೂ ಡಿಕೆಶಿ ಅವರಿಂದಲೇ ಪಕ್ಷ ಅಧಿಕಾರಕ್ಕೆ ಬರಲಿ. ನನಗೆ ಆತುರವೇನಿಲ್ಲ. ಅವರ ಪ್ರಯತ್ನ, ಫಲದಿಂದ ಸರ್ಕಾರ ಬಂದರೆ ಮತ್ತೊಮ್ಮೆ ಮುಖ್ಯಮಂತ್ರಿ ಆಗಬಾರದೇಕೆ? ಎಂದು ಪ್ರಶ್ನಿಸಿದರು.



### ಸಿದ್ದು ಆರ್ಮಿ ಛಿದ್ರವಾಗಿಲ್ಲ

**ಮೈಸೂರು:** ಸಿದ್ದರಾಮಯ್ಯ ಅವರ ಆರ್ಮಿ ಛಿದ್ರವಾಗಿಲ್ಲ. ಈಗಲೂ ಅವರೇ ನಮಗೆ ಕ್ಯಾಪ್ಟನ್, ನಾನು ವೈಸ್ ಕ್ಯಾಪ್ಟನ್ ಎಂದು ಸಚಿವ ಸತೀಶ್ ಜಾರಕಿಹೊಳಿ ಅಭಿಪ್ರಾಯಪಟ್ಟರು.

ನಗರದಲ್ಲಿ ಶುಕ್ರವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರೇ ನಮ್ಮ ಕ್ಯಾಪ್ಟನ್ ಎಂಬ ಬಗ್ಗೆ ಯಾರಿಗೂ ಅನುಮಾನ ಬೇಡ. ನಾನು ಸಿದ್ದರಾಮಯ್ಯ ಚೆನ್ನಾಗಿಯೇ ಇದ್ದೇವೆ. ನಾವು ಹಿಂದೆಯೂ ಪ್ರತಿ ಬಾರಿ ಭೇಟಿಯಾಗುತ್ತಿರಲಿಲ್ಲ. ಪದೇ ಪದೇ ಜೊತೆಯಲ್ಲಿ ಇರುತ್ತಿರಲಿಲ್ಲ. ಅವಶ್ಯಕತೆ ಇದ್ದಾಗ ಭೇಟಿಯಾಗುತ್ತೇವೆ. ಪುಟ 2ಕ್ಕೆ

### ಇಡಿ ನೋಟಿಸ್ ನೀಡಿದರೆ ಉತ್ತರ

ಇಡಿಗೆ ನನ್ನ ವಿರುದ್ಧ ಯಾರು ದೂರು ಕೊಟ್ಟಿದ್ದಾರೆ. ಹಿನ್ನೆಲೆ ಏನು ಎಂಬುದನ್ನು ಗಮನಿಸುತ್ತಿದ್ದೇನೆ. ದಾಳಿಯಿಂದ ಮಾನಸಿಕವಾಗಿ ಕುಗ್ಗಿಲ್ಲ. ಎಲ್ಲವನ್ನೂ ಎದುರಿಸುತ್ತೇನೆ ಎಂದು ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಯಾವುದೇ ಕ್ಷಣದಲ್ಲಿ ನನಗೆ ಜಾರಿ ನಿರ್ದೇಶನಾಲಯದ ನೋಟಿಸ್ ಬರಬಹುದು. ಬಂದರೆ, ಅದಕ್ಕೆ ಉತ್ತರ ಕೊಡುತ್ತೇನೆ. ವಿದೇಶದಲ್ಲಿ ನಾವು ಹೂಡಿಕೆ ಮಾಡಿದ್ದೇವೆಯೋ ಇಲ್ಲವೋ ಎಂಬುದನ್ನು ಮಾಧ್ಯಮದ ಮುಂದೆ ಹೇಳುವುದಿಲ್ಲ. ಇಡಿ ಮುಂದೆ ಉತ್ತರಿಸುತ್ತೇನೆ ಎಂದು ಪ್ರತಿಕ್ರಿಯಿಸಿದರು.

ಯಾವುದೋ ಕಮಿಷನ್ ವಿಚಾರಕ್ಕೆ ದಾಳಿಯಾಗಿದೆಯೋ ಅಥವಾ ಬೇರೆ ವಿಚಾರಕ್ಕೊ ಎಂಬುದನ್ನೂ ಅಲ್ಲೇ ಹೇಳುತ್ತೇನೆ. ಇಡಿಯದು ಸಂಪೂರ್ಣವಾಗಿ ರಾಜಕೀಯ ವಾದ ದಾಳಿ. ಕಳೆದ 14 ವರ್ಷಗಳಿಂದ ಪುಟ 2ಕ್ಕೆ



### ಸರ್ಕಾರ ದಿವಾಳಿ ಆಗಿಲ್ಲ: ಜಾರಕಿಹೊಳಿ

ಆರ್ಥಿಕ ಇಲಾಖೆಯ ಪತ್ರ ವಿಚಾರಕ್ಕೆ ಪ್ರತಿಕ್ರಿಯಿಸಿದ ಸತೀಶ್ ಜಾರಕಿಹೊಳಿ ಅವರು, ಆರ್ಥಿಕ ಇಲಾಖೆ ಸರ್ಕಾರ ಬೊಕ್ಕಸ ಖಾಲಿಯಾಗಿದೆ ಎಂದು ಹೇಳಿಲ್ಲ. ಬಜೆಟ್ ನಲ್ಲಿ ಏನು ಘೋಷಣೆ ಮಾಡಿದ್ದೇವೆಯೋ ಅಷ್ಟಕ್ಕೆ ಮಾತ್ರ ನಮ್ಮ ಬಳಿ ಹಣ ಇದೆ ಎಂದು ಹೇಳಿದೆ. ಹೊಸ ಘೋಷಣೆಗಳಿಗೆ ಹಣ ಹೊಂದಿಸುವುದು ಕಷ್ಟ ಎಂದು ಹೇಳಿದೆ ಎಂದು ಹೇಳಿದರು. ಹೊಸ ಘೋಷಣೆ ಮಾಡುವಾಗ ಯೋಚನೆ ಮಾಡಿ ಘೋಷಿಸಿ ಎಂದು ಹೇಳಿದ್ದಾರೆ. ಎಲ್ಲಾ ಸರ್ಕಾರದಲ್ಲೂ ಆರ್ಥಿಕ ಇಲಾಖೆ ಇದನ್ನೇ ಹೇಳುತ್ತದೆ. ಅದನ್ನು ನಾವು ಗಮನಿಸುತ್ತೇವೆ. ಕೆಲವೊಂದು ಇಲಾಖೆಗಳಲ್ಲಿ ಹಣ ವೆಚ್ಚಾಗುವುದಿಲ್ಲ. ಆ ಹಣವನ್ನ ಹೊಸ ಘೋಷಣೆಗಳಿಗೆ ಬಳಸುತ್ತೇವೆ. ಆರ್ಥಿಕ ಇಲಾಖೆ ಪತ್ರದ ಅರ್ಥ ಸರ್ಕಾರ ದಿವಾಳಿಯಾಗಿದೆ ಎಂಬುದು ಅಲ್ಲ ಎಂದು ಸಮರ್ಥಿಸಿಕೊಂಡರು.

### ಎಸ್ಐಆರ್‌ನಿಂದ ಶಿಕ್ಷಕರ ಹೊರಗಿಡಿ

**ಮಾನವೀಯತೆ ಇಲ್ಲದೆ ಚುನಾವಣಾ ಆಯೋಗ: ಸಚಿವ ಮಧು ಆಕ್ರೋಶ**

**ಬೆಂಗಳೂರು:** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ ಕಾರ್ಯಕ್ಕೆ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳ ಶಿಕ್ಷಕರನ್ನು ನಿಯೋಜಿಸಿರುವುದರಿಂದ ಮಕ್ಕಳ ಶಿಕ್ಷಣಕ್ಕೆ ತೀವ್ರ ತೊಂದರೆಯಾಗುತ್ತಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಟೀಕಿಸಿದರು.



ಬೆಂಗಳೂರಿನ ಗೃಹ ಕಚೇರಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ನಮ್ಮ ಶಿಕ್ಷಕರನ್ನು ಎಸ್ಐಆರ್ ಪ್ರಕ್ರಿಯೆಯಿಂದ ಹೊರಗಿಡಿ. ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತಿದೆ ಎಂದು ಚುನಾವಣೆ ಆಯೋಗಕ್ಕೆ ಪತ್ರ ಬರೆದಿದ್ದರೂ ಯಾವುದೇ ಸ್ಪಂದನೆ ದೊರೆತಿಲ್ಲ. ಚುನಾವಣಾ ಆಯೋಗ ಮಾನವೀಯತೆ ಇಲ್ಲದೆ ವರ್ತಿಸುತ್ತಿದೆ ಎಂದು ಹೇಳಿದರು.

ಎಸ್ಐಆರ್ ಕಾರ್ಯದ ಹೊರೆಯಿಂದಾಗಿ ಶಿಕ್ಷಕರು ಬಳಲಿದ್ದಾರೆ. ಈ ಕಾರ್ಯ ವಿಳಂಬವಾಗುತ್ತಲೇ ಇದೆ. ಶಾಲೆಗಳಲ್ಲಿ ಸರಿಯಾಗಿ ಶೈಕ್ಷಣಿಕ ಚಟುವಟಿಕೆ ನಡೆಯದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಮುಂದಿನ ದಿನಗಳಲ್ಲಿ ಮಕ್ಕಳ ಫಲಿತಾಂಶದ ಮೇಲೂ ಪರಿಣಾಮ ಬೀರುವ ಆತಂಕವಿದೆ ಎಂದು ಹೇಳಿದರು.

### ಶಿಕ್ಷಕರ ಬಳಕೆ ನಿಷೇಧಿಸಿ ಮಸೂದೆ ಜಾರಿ: ಸಚಿವ

ವಿವಿಧ ಸಮೀಕ್ಷೆ, ಜಾತಿಗಣತಿ ಹಾಗೂ ಆಡಳಿತಾತ್ಮಕ ಸರ್ವೇ ಕಾರ್ಯಗಳಿಗೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಶಿಕ್ಷಕರನ್ನು ಬಳಸಿಕೊಳ್ಳದಂತೆ ಹೊಸ ಮಸೂದೆ ರೂಪಿಸಲಾಗುತ್ತಿದೆ ಎಂದು ಸಚಿವ ಮಧು ಬಂಗಾರಪ್ಪ ಮಾಹಿತಿ ನೀಡಿದರು.ಜಾತಿ ಗಣತಿ, ವಿವಿಧ ಸರ್ವೇ ಸೇರಿದಂತೆ ಹಲವು ಕೆಲಸಗಳಿಗೆ ಶಿಕ್ಷಕರನ್ನೇ ಬಳಸಿಕೊಳ್ಳುವ ವ್ಯವಸ್ಥೆ ನಿರ್ಮಾಣವಾಗಿದೆ. ಇದನ್ನು ಬದಲಾಯಿಸಲೇಬೇಕಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಇನ್ನು ಮುಂದೆ ಹೀಗಾಗಬಾರದು. ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಬೇಕಾದರೆ, ಶಿಕ್ಷಕರನ್ನು ಅನ್ಯ ಕೆಲಸಗಳಿಗೆ ಬಳಸಿಕೊಳ್ಳುವುದು ನಿಲ್ಲಬೇಕು. ಇದಕ್ಕಾಗಿ ಹೊಸ ವಿಧೇಯಕ ಸಿದ್ಧಪಡಿಸುತ್ತಿದ್ದೇನೆ. ಈಗಾಗಲೇ ಅಧಿಕಾರಿಗಳೊಂದಿಗೆ ಸಭೆ ನಡೆಸಿ ವಿಧೇಯಕವನ್ನು ಹೇಗೆ ರೂಪಿಸಬೇಕು ಎಂಬ ಕುರಿತು ಚರ್ಚಿಸಿದ್ದೇನೆ. ಸಚಿವ ಸಂಪುಟದ ಚರ್ಚಿಸಿ, ಅಧಿವೇಶನದಲ್ಲಿ ಬಿಲ್ ಜಾರಿಗೆ ತರುವ ಪ್ರಯತ್ನ ಮಾಡುತ್ತೇವೆ ಎಂದು ಮಧು ಬಂಗಾರಪ್ಪ ತಿಳಿಸಿದರು.

### ನಕಲಿ ಔಷಧಿ ಜಾಲ: ದೊಡ್ಡ ಖಾಸಗಿ ಆಸ್ಪತ್ರೆಗಳೂ ಭಾಗಿ

**ಬೆಂಗಳೂರು:** ನಕಲಿ ಔಷಧಿ ಜಾಲದಲ್ಲಿ ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳು ಭಾಗಿ ಆಗಿರುವುದು ತನಿಕೆಯಲ್ಲಿ ಬೆಳಕಿಗೆ ಬಂದಿದೆ ಎಂದು ಆರೋಗ್ಯ ಸಚಿವರೇ ಆತಂಕ ವ್ಯಕ್ತಪಡಿಸಿದ್ದಾರೆ.

ನಕಲಿ ಔಷಧಿ ಜಾಲ ಬಗೆದಷ್ಟು ಬಯಲಾಗುತ್ತಿದೆ. ನಕಲಿ ಔಷಧಿ ಜಾಲದಲ್ಲಿ ತೊಡಗಿದ್ದ 24 ಔಷಧ ಸಂಸ್ಥೆಗಳ ವಿರುದ್ಧ ಕ್ರಮ ಆಗಿದೆ. ಈಗ ಇದು ಸ್ಯಾಂಪಲ್ ಅಷ್ಟೇ. ನಕಲಿ ಔಷಧಿ ಜಾಲದಲ್ಲಿ ದೊಡ್ಡ ದೊಡ್ಡ ಖಾಸಗಿ ಆಸ್ಪತ್ರೆಗಳು ತೊಡಗಿವೆ. ಎಸ್ಐಟಿ ತನಿಖೆ ಆಗುತ್ತಿದೆ. ಶೀಘ್ರದಲ್ಲೇ ಪಟ್ಟಿ ಬಿಡುಗಡೆ ಮಾಡುತ್ತೇವೆ ಎಂದು ಸಚಿವ ಯು.ಟಿ.ಖಾದರ್ ತಿಳಿಸಿದರು.

ಫೈಜರ್ ಕಂಪನಿ ವಿರುದ್ಧ ಕ್ರಮ ವಹಿಸುವುದಕ್ಕೆ ಸರ್ಕಾರ ಮುಂದಾಗಿದೆ. ಕಂಪನಿಯ ಲೆಸನ್ಸ್ ಅಮಾನತು ಮಾಡಲಾಗಿದೆ. ವಿಚಾರಣೆಗೆ ಫೈಜರ್ ಕಂಪನಿ ಸಹಕಾರ ನೀಡಿರಲಿಲ್ಲ. ಜೊತೆಗೆ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಇರುವ ಖಾಸಗಿ ಮೆಡಿಕಲ್ ಸ್ಟೋರ್‌ಗಳನ್ನು ಚೆಕ್ ಮಾಡುವುದಾಗಿ ತಿಳಿಸಿದ್ದಾರೆ.





ಚಿತ್ರ ಎ.ಕೃಷ್ಣೋಜಿರಾವ್

### ಮಹೇಂದ್ರನ ತಾಲೀಮಿಗೆ ಮಳೆ ವಿಘ್ನ

**ಮೈಸೂರು:** ಮೈಸೂರು ದಸರಾ ಮಹೋತ್ಸವದ ಗಜಪಡೆ ತಾಲೀಮು ಈಗ ಮತ್ತೊಂದು ಪ್ರಮುಖ ಘಟ್ಟಕ್ಕೆ ತಲುಪಿದೆ. ದಸರಾ ಗಜಪಡೆಗೆ ಶುಕ್ರವಾರ 3ನೇ ಹಂತದ ಮಹತ್ವದ ಮರದ ಅಂಬಾರಿ ಹೊರುವ ತಾಲೀಮು ಅಧಿಕೃತವಾಗಿ ಪ್ರಾರಂಭವಾಯಿತು.

ದಸರಾ ಜಂಬೂಸವಾರಿಯ ಸಿದ್ಧತೆಗಳು ತೀವ್ರಗೊಂಡಿವೆ. ತಾಲೀಮಿಗೂ ಮುನ್ನ ಅರಣ್ಯ ಇಲಾಖೆ ಸಿಬ್ಬಂದಿ ಗಜಪಡೆಗೆ ವಿಶೇಷ ಧಾರ್ಮಿಕ ಪೂಜೆ ಸಲ್ಲಿಕೆ ಮಾಡಿದರು. ಬಳಿಕ ಮಹೇಂದ್ರನಿಗೆ ಮರದ ಅಂಬಾರಿ ನಮ್ದಾ ಮತ್ತು ಗಾದಿ ಸೇರಿದಂತೆ ಒಟ್ಟು 1,000 ಕೆಜಿ ಭಾರ ಹೊರಿಸಿ ಅಂಬಾರಿ ತಾಲೀಮಿಗೆ ಚಾಲನೆ ನೀಡಲಾಯಿತು. ಈ ವೇಳೆ ಮಹೇಂದ್ರನಿಗೆ ಕುಮ್ಕಿ ಆನೆಗಳಾಗಿ ಲಕ್ಷ್ಮಿ ಮತ್ತು ಚೈತ್ರ ಸಾತ್ ನೀಡಿದರು. ಉಳಿದ ಎಲ್ಲಾ ಆನೆಗಳು ಹಿಂಬಾಲಿಸಿದವು.

ಅರಮನೆಯಿಂದ ಹೊರಟ ಗಜಪಡೆ ಬನ್ನಿಮಂಟಪದವರೆಗೆ ರಾಜಮಾರ್ಗದಲ್ಲಿ ತಾಲೀಮು ನಡೆಸಬೇಕಿತ್ತು. ಆದರೆ, 1,000 ಕೆಜಿ ತೂಕ ಹೊತ್ತು ಮಹೇಂದ್ರ ಆನೆ ಹೆಜ್ಜೆ ಹಾಕುತ್ತಿದ್ದಂತೆಯೇ ದಿಢೀರ್ ಭಾರಿ ಮಳೆ ಆರಂಭವಾಯಿತು. ಮಳೆ ನೀರು ನೇರವಾಗಿ ಆನೆ ಮೇಲೆ ಬಿದ್ದಿದ್ದರಿಂದ ಅಂಬಾರಿಯ ಅಡಿಯಲ್ಲಿ ಹಾಕಿದ್ದ ನಮ್ದಾ ನೀರನ್ನು ಹೀರಿಕೊಂಡು ತೂಕ ಮತ್ತಷ್ಟು ಹೆಚ್ಚಾಯಿತು. ಜೊತೆಗೆ ಆನೆಗೆ ಕಟ್ಟಿದ್ದ ಹಗ್ಗದ ಬಿಗಿತವೂ ಹೆಚ್ಚಾದ ಕಾರಣದಿಂದ ಅರಮನೆಯ ಬಲರಾಮ ದ್ವಾರದ ಬಳಿ ತಲುಪುತ್ತಿದ್ದಂತೆಯೇ ಮಹೇಂದ್ರ ಮುಂದೆ ಸಾಗಲು ಹಿಂದೇಟು ಹಾಕಿ ಸ್ಥಳದಲ್ಲೇ ನಿಂತುಬಿಟ್ಟನು. ಮಹೇಂದ್ರ ಆನೆ ಮುಂದೆ ಸಾಗಲು ಹಿಂದೇಟು ಹಾಕಿದ್ದನ್ನು ಗಮನಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಮಾವುತರು ಸುರಕ್ಷತೆಯ ದೃಷ್ಟಿಯಿಂದ ತಕ್ಷಣವೇ ತಾಲೀಮನ್ನು ಮೊಟಕುಗೊಳಿಸಲು ನಿರ್ಧರಿಸಿದರು. ಮುಂಜಾಗ್ರತಾ ಕ್ರಮವಾಗಿ ಮರದ ಅಂಬಾರಿಯನ್ನು ಕೆಳಗಿಳಿಸಲಾಯಿತು. ಬಳಿಕ ಅಂಬಾರಿ ಇಲ್ಲದೆ ನಿತ್ಯದ ಸಾಮಾನ್ಯ ತಾಲೀಮಿಗೆ ದಸರಾ ಗಜಪಡೆ ಕರೆದೊಯ್ಯಲಾಯಿತು.

ಈ ಕುರಿತು ಡಿಸಿಎಫ್ ಪ್ರಭುಗೌಡ ಮಾತನಾಡಿ, ಗಜಪಡೆಗೆ ಹಂತ ಪುಟ 2ಕ್ಕೆ

### ಇಬ್ಬರು ಶಂಕಿತ ಉಗ್ರರ ಬಂಧನ

**ಚಿಕ್ಕಬಳ್ಳಾಪುರ:** ರಾಜ್ಯದಲ್ಲಿ ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸುತ್ತಿದ್ದ ಇಬ್ಬರು ಶಂಕಿತ ಉಗ್ರರನ್ನು ಪೊಲೀಸರು ಬಂಧಿಸಿದ್ದಾರೆ.

ಕೇಂದ್ರ ಗುಪ್ತಚರ ಇಲಾಖೆ ಮಾಹಿತಿ ಆಧರಿಸಿ ರಾಜ್ಯ ಪೊಲೀಸ್ ಮತ್ತು ಹೊರ ರಾಜ್ಯದ ಭಯೋತ್ಪಾದನಾ ನಿಗ್ರಹ ದಳ ಜಂಟಿ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಿರುವುದಾಗಿ ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಆರೋಪಿಗಳ ಗುರುತನ್ನು ಬಹಿರಂಗಪಡಿಸದ ಪೊಲೀಸರು, ಅವರಲ್ಲಿ ಒಬ್ಬ ಚಿಕ್ಕಬಳ್ಳಾಪುರ ಜಿಲ್ಲೆಯ ನಿವಾಸಿ. ಮತ್ತೊಬ್ಬ ಕೆಲ ಕಾಲದಿಂದ ಕರ್ನಾಟಕದಲ್ಲಿ ವಾಸಿಸುತ್ತಿದ್ದಾನೆ ಎಂದು ಹೇಳಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೂ ಅವರು ಮಾತನಾಡಿ, ಸಾರ್ವಜನಿಕ ಶಾಂತಿಗೆ ಧಕ್ಕೆ ತರಲು ಈ ಇಬ್ಬರು ಸಂಚು ರೂಪಿಸುವ ಚಟುವಟಿಕೆಯಲ್ಲಿ ಭಾಗಿಯಾಗಿದ್ದರೆಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ ಎಂದು ಹೇಳಿದರು.





### ಶ್ರೀರಂಗಪಟ್ಟಣ ದಸರಾ ಉದ್ಘಾಟಿಸುವ ‘ಕ್ರೇಜಿಸ್ಟಾರ್’

**ಮಂಡ್ಯ:** ಶ್ರೀರಂಗಪಟ್ಟಣ ದಸರಾ ಮಹೋತ್ಸವವನ್ನು ಖ್ಯಾತನಟ, ‘ಕ್ರೇಜಿಸ್ಟಾರ್’ ವಿ.ರವಿಚಂದ್ರನ್ ಉದ್ಘಾಟಿಸುವರು. ಶಾಸಕ ರಮೇಶ ಬಂಡಿಸಿದ್ದೇಗೌಡ ನೇತೃತ್ವದ ನಿಯೋಗ ನಟ ರವಿಚಂದ್ರನ್ ನಿವಾಸಕ್ಕೆ ತೆರಳಿ ಅಧಿಕೃತವಾಗಿ ಆಹ್ವಾನ ನೀಡಿದೆ.



ಕನ್ನಡ ಚಿತ್ರರಂಗಕ್ಕೆ ರವಿಚಂದ್ರನ್ ನೀಡಿರುವ ಅಪಾರ ಕೊಡುಗೆಯನ್ನು ಗೌರವಿಸಿ ಜಿಲ್ಲಾಡಳಿತ ಈ ನಿರ್ಧಾರ ಕೈಗೊಂಡಿದೆ. ಈ ಐತಿಹಾಸಿಕ ಸಾಂಸ್ಕೃತಿಕ ಹಬ್ಬಕ್ಕೆ ಸಿನಿಮಾ ರಂಗದ ಪುಟ 2ಕ್ಕೆ

### ಕಾವೇರಿ ಆರತಿಗೂ ಸಿದ್ಧತೆ

ಈ ಬಾರಿಯ ದಸರಾ ಮಹೋತ್ಸವದಲ್ಲಿ ಅತ್ಯಂತ ಪ್ರಮುಖ ಧಾರ್ಮಿಕ ಮತ್ತು ಪ್ರವಾಸಿ ಆಕರ್ಷಣೆಯೆಂದರೆ ಕಾವೇರಿ ಆರತಿ. ಅದರಂತೆ, ಅಕ್ಟೋಬರ್ 11ರಿಂದ ಆರಂಭಗೊಂಡು ಒಟ್ಟು ಆರು ದಿನಗಳ ಕಾಲ ಜರುಗಲಿದೆ. ವಾರಣಾಸಿಯ ಗಂಗಾ ಆರತಿ ಮಾದರಿಯಲ್ಲಿಯೇ, ವಾರಣಾಸಿಯಿಂದ ಆಗಮಿಸುವ ವಿಶೇಷ ಅರ್ಚಕರ ತಂಡ ಕೃಷ್ಣರಾಜಸಾಗರ ಬೃಂದಾವನ ಗಾರ್ಡನ್ಸ್ ಬಳಿ ಕಾವೇರಿ ನದಿಗೆ ಮಹಾ ಆರತಿ ನೆರವೇರಿಸಲಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉದ್ಘಾಟಿಸಲಿದ್ದಾರೆ.

### ಫಿರಂಗಿ ಗಾಡಿಗಳಿಗೆ ಪೂಜೆ

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಸಾಂಸ್ಕೃತಿಕ ನಗರ ಮೈಸೂರು ಸಜ್ಜಾಗುತ್ತಿದೆ. ಅರಮನೆ ಆವರಣದ ಆನೆ ಬಾಗಿಲಿನ ಬಳಿ ಇರುವ 11 ಫಿರಂಗಿ ಗಾಡಿಗಳಿಗೆ ಶುಕ್ರವಾರ ಸಂಪ್ರದಾಯಬದ್ಧವಾಗಿ ವಿಶೇಷ ಪೂಜೆ ಸಲ್ಲಿಕೆ ಮಾಡಲಾಯಿತು.

ಅರಮನೆಯ ಆನೆ ಬಾಗಿಲಿನ ಬಳಿ ಇರುವ 11 ಫಿರಂಗಿ ಗಾಡಿಗಳಿಗೆ ಅರ್ಚಕ ಪ್ರಹ್ಲಾದ್ ರಾವ್ ನೇತೃತ್ವದಲ್ಲಿ ಮಂಗಳವಾದ್ಯಗಳ ನಿನಾದದೊಂದಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ವಿಜಯದಶಮಿಯಂದು ಜಂಬೂಸವಾರಿ ಮೆರವಣಿಗೆ ಆರಂಭವಾಗುವಾಗ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸುವ ಚಾಮುಂಡೇಶ್ವರಿ ದೇವಿಗೆ ಸಿಎಂ ಸೇರಿ ಗಣ್ಯರು ಪುಷ್ಪಾರ್ಚನೆ ಮಾಡಲಿದ್ದಾರೆ. ಈ ವೇಳೆ ರಾಷ್ಟ್ರಗೀತೆ ನುಡಿಸುವ ಕೆಲವೇ ಸೆಕೆಂಡುಗಳಲ್ಲಿ 7 ಫಿರಂಗಿ



ಚಿತ್ರ ಎ.ಕೃಷ್ಣೋಜಿರಾವ್

### ಗ್ಯಾನೇಂದ್ರ ಜಾಮೀನು ಅರ್ಜಿ ವಜಾ

**ಬೆಂಗಳೂರು:** ಕೆಪಿಎಸ್‌ಸಿ ಪಶುವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮ ಪ್ರಕರಣದ ಬಂಧಿತ ಆರೋಪಿ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಜಾಮೀನು ಅರ್ಜಿಯನ್ನು 52ನೇ ಸಿಸಿಹೆಚ್ ಕೋರ್ಟ್ ವಜಾ ಮಾಡಿದೆ.



ಪ್ರಕರಣದ ತನಿಖೆ ನಡೆಸಿದ್ದ ಸಿಐಡಿ ಗ್ಯಾನೇಂದ್ರ ಕುಮಾರ್ ಅನ್ನು ಬಂಧಿಸಿತ್ತು. ಅಧಿಕಾರಿ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸಿದ್ದ ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿ ಹಗರಣದಲ್ಲಿ ಗ್ಯಾನೇಂದ್ರ ಕುಮಾರ್ ಹಾಗೂ ಬಿಜೆಪಿ ಮುಖಂಡ ಬಸವರಾಜ್ ಕನ್ನಾಳೆ ಜೈಲು ಪಾಲಾಗಿದ್ದಾರೆ.

### ವಿಪಕ್ಷಗಳಿಂದ ರಾಜಕೀಯ: ಪರಮೇಶ್ವರ್ ಕಿಡಿ

**ಬೆಂಗಳೂರು:** ವಿಪಕ್ಷಗಳು ಬರ ಪರಿಹಾರ ವಿಚಾರದಲ್ಲಿ ರಾಜಕೀಯ ಮಾಡುತ್ತಿವೆ ಎಂದು ಡಿಸಿಎಂ ಪರಮೇಶ್ವರ್ ವಿಪಕ್ಷಗಳ ವಿರುದ್ಧ ಕಿಡಿಕಾರಿದರು.



ರಾಜ್ಯ ಸರ್ಕಾರ ಕೊಟ್ಟಿರುವ ಬರ ಪರಿಹಾರ ಕಡಿಮೆ ಆಯ್ತು ಎಂಬ ವಿಪಕ್ಷಗಳ ಆರೋಪ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ವಿಪಕ್ಷಗಳು ಹೇಳೋದು ಹೇಳ್ತಾರೆ. ಅವರಿಗೆ ರಾಜಕೀಯ ಬೇಕು. ಅವರಿಗೆ ಜನರು, ರೈತರಿಗೆ ಸಹಾಯ ಮಾಡೋದು ಬೇಕಿಲ್ಲ. 1250 ಕೋಟಿ ಸಣ್ಣ ಹಣವೇ? ಸ್ವಾಭಾವಿಕವಾಗಿ ಅದು ಕಡಿಮೆ ಅನ್ನಿಸುತ್ತದೆ. ನಾವು ತಕ್ಷಣ ಮೊದಲ ಹಂತದಲ್ಲಿ ಇಷ್ಟು ಪರಿಹಾರ ಅಂತ ಕೊಡ್ತಾ ಇದ್ದೀವಿ ಎಂದು ತಿಳಿಸಿದರು.

ಪರಿಹಾರ ಅಲ್ಲದೆ ಬೇರೆ ಬೇರೆ ಬೆನಿಫಿಟ್‌ಗಳನ್ನ ರೈತರಿಗೆ ಕೊಟ್ಟಿದ್ದೇವೆ. ಪವರ್ ಸಬ್ಸಿಡಿ 22 ಸಾವಿರ ಕೋಟಿ ಕೊಡ್ತಾ ಇದ್ದೇವೆ. ರೈತರಿಗೆ ಫ್ರೀ ಪವರ್ ಕೊಡ್ತಾ ಇದ್ದೀವಿ. ಅದು ಸಹಾಯ ಅಲ್ಲವಾ? ಅಕ್ಕಿ ಕೊಡ್ತಾ ಇದ್ದೇವೆ. 2 ಸಾವಿರ ಹಣ ರೈತರ ಹೆಣ್ಣುಮಕ್ಕಳು ಅಲ್ಲವಾ ತಗೊಳ್ಳೋದು. ಮುಂದೆ ಕೇಂದ್ರ ಸರ್ಕಾರ ಪರಿಹಾರ ಕೊಟ್ಟಾಗ ನೋಡೋಣ ಎಂದರು.

ಪರಿಹಾರದ ಮೊತ್ತ ಜಾಸ್ತಿ ಆಗುತ್ತದೆ ಅಂತ ನಾನು ಈಗ ಏನು ಹೇಳೋಕೆ ಆಗೊಲ್ಲ. ಕೇಂದ್ರ ಸರ್ಕಾರ ನಮಗೆ ಯಾವ ರೀತಿ ಸಹಾಯ ಕೊಡುತ್ತದೆ ಅದರ ಮೇಲೆ ನಿರ್ಧಾರ ಆಗುತ್ತದೆ ಎಂದು ತಿಳಿಸಿದರು.

ಈಗಾಗಲೇ ಕೇಂದ್ರಕ್ಕೆ ಮನವಿ ಪತ್ರ ಕೊಟ್ಟಿದ್ದೇವೆ. ಇನ್ನು ಎರಡು ಪತ್ರ ಕೊಡ್ತೀವಿ. ಅಂತಿಮವಾಗಿ ಫೈನಲ್ ಮನವಿ ಕೊಟ್ಟಾಗ ಎಷ್ಟು ನಷ್ಟವಾಗಿದೆ ಅಂತ ಗೊತ್ತಾಗುತ್ತದೆ. 40 ಸಾವಿರ ಕೋಟಿ ಮೇಲೆ ನಷ್ಟ ಆಗಿದೆ ಅಂತ ಅಂದಾಜು ಮಾಡಿದ್ದೇನೆ. ಅದನ್ನ ಗೈಡ್‌ಲೈನ್ಸ್ ಪ್ರಕಾರ ಮಾಡಿದರೆ ಎಷ್ಟು ಆಗಬಹುದು ಪುಟ 2ಕ್ಕೆ

# ಪೌರಕಾರ್ಮಿಕರಿಗೆ ಭರಪೂರ ಕೊಡುಗೆ

## ಉಪಾಹಾರ ವೇತನ 35ರಿಂದ 70ಕ್ಕೆ ಹೆಚ್ಚಳ: ಸಿಎಂ ಡಿಕೆಶಿ ಘೋಷಣೆ

**ಬೆಂಗಳೂರು:** ಮಧ್ಯವರ್ತಿಗಳಿಗೆ ಅವಕಾಶ ನೀಡದೆ ಪೌರಕಾರ್ಮಿಕರಿಗೆ ಸೌಲಭ್ಯಗಳನ್ನು ನೀಡಲಾಗುವುದು. ಅದಕ್ಕಾಗಿ ಸಚಿವ ಸಂಪುಟ ಉಪಸಮಿತಿ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ನಗರಾಭಿವೃದ್ಧಿ ಇಲಾಖೆ ಹಾಗೂ ಪೌರಾಡಳಿತ ನಿರ್ದೇಶನಾಲಯ ಏರ್ಪಡಿಸಿದ್ದ ಪೌರಕಾರ್ಮಿಕರ ದಿನಾಚರಣೆಯಲ್ಲಿ ಮಾತನಾಡಿದರು.

ಪೌರಕಾರ್ಮಿಕರ ಸಮವಸ್ತ್ರ ಧರಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜ ಕಲ್ಯಾಣ, ನಗರಾಭಿವೃದ್ಧಿ ಇಲಾಖೆಯ ಪ್ರಮುಖರನ್ನು ಉಪಸಮಿತಿಗೆ ನೇಮಿಸಲಾಗುವುದು ಎಂದು ಹೇಳಿದರು.

ಪೌರಕಾರ್ಮಿಕರ ನಿತ್ಯದ ಉಪಾಹಾರ ವೇತನವನ್ನು 35ರಿಂದ 70ಕ್ಕೆ ಏರಿಸಲಾಗುವುದು. ಕಾರ್ಮಿಕರ ಮಕ್ಕಳಿಗೆ ವಿಶೇಷ ವಸತಿ ಶಾಲೆ ಸ್ಥಾಪಿಸಲಾಗುವುದು. ಪೌರ ಭವನ ನಿರ್ಮಾಣ ಮಾಡಲಾಗುವುದು. ಪೌರಕಾರ್ಮಿಕರ ವಾಹನಗಳ ಚಾಲಕರಿಗೆ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಮುಂದಿನ ವಾರ ವಿಶೇಷ ಸಭೆ ನಡೆಸಲಾಗುವುದು ಎಂದು ಸಿಎಂ ಭರವಸೆ ನೀಡಿದರು.



ಕಾರ್ಮಿಕರು ಇಲ್ಲದಿದ್ದರೆ ಸ್ವಚ್ಛತೆ ಇರುವುದಿಲ್ಲ. ಏಕೆಂದರೆ ಪೌರಕಾರ್ಮಿಕರು ಸ್ವಚ್ಛತೆಯ ರಾಯಭಾರಿಗಳು. ನಿಮ್ಮ ಕೆಲಸದ ಬಗ್ಗೆ ಕೀಳರಿಮೆ ಬಿಡಿ. ನಿಮ್ಮ ಕೈಗಳು ಕರುನಾಡನ್ನು ಕಾಪಾಡುವ ಕೈಗಳು. ಪೌರಕಾರ್ಮಿಕರ ಮೇಲೆ ದರ್ಪ ತೋರುವ ಸಿಬ್ಬಂದಿ ವರ್ತನೆಯನ್ನು ಬದಲಿಸಿಕೊಳ್ಳಬೇಕು ಎಂದು ಸೂಚಿಸಿದರು.

### ಪೌರಕಾರ್ಮಿಕ ಮಂಡಳಿ ಸ್ಥಾಪಿಸಿ

ರಾಜ್ಯದಲ್ಲಿ ಪೌರಕಾರ್ಮಿಕ ಕಲ್ಯಾಣ ಮಂಡಳಿ ಸ್ಥಾಪಿಸಬೇಕು ಎಂದು ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದರು. ಪೌರಕಾರ್ಮಿಕರನ್ನು ನೇರ ನೇಮಕಾತಿಗೆ ಒಳಪಡಿಸಿ, ನೇರ ವೇತನ ಪಾವತಿ ವ್ಯವಸ್ಥೆ ಜಾರಿಗೊಳಿಸಬೇಕು. ಪುಟ 2ಕ್ಕೆ

# ಸರ್ಕಾರಕ್ಕೆ ಕಣ್ಣು ಕಾಣಲ್ಲ ಕಿವಿ ಕೇಳಲ್ಲ, ಹೃದಯ ಇಲ್ಲ

## ಬಿಡದಿ ಹೋರಾಟಕ್ಕೆ ಜಯ ಸಿಕ್ಕೇ ಸಿಗುತ್ತೆ, ಸಂಪೂರ್ಣ ಯೋಜನೆಗೆ ಸ್ಟೇ ಸಿಗುತ್ತೆ: ನಿಖಿಲ್ ವಿಶ್ವಾಸ

## ಬೈರಮಂಗಲಕ್ಕೆ ದೇವೇಗೌಡರನ್ನು ಕರೆ ತರಲು ಪ್ರಯತ್ನ

ರಾಮನಗರ: ಈ ಸರ್ಕಾರಕ್ಕೆ ಕಣ್ಣು ಕಾಣುತ್ತಿಲ್ಲ, ಕಿವಿಯೂ ಕೇಳುತ್ತಿಲ್ಲ, ಹೃದಯವೂ ಇಲ್ಲ ಎಂದು ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯ ಸರ್ಕಾರದ ವಿರುದ್ಧ ಕಿಡಿ ಕಾರಿದರು.

ಬಿಡದಿ ಹೋಬಳಿ ಬೈರಮಂಗಲಕ್ಕೆ ಭೇಟಿ ನೀಡಿದ್ದ ಅವರು ಸಮಗ್ರ ನಗರ ಯೋಜನೆಯ ಭೂಸ್ವಾಧೀನವನ್ನು ವಿರೋಧಿಸಿ ನಡೆಯುತ್ತಿರುವ ಉಪವಾಸ ಸತ್ಯಾಗ್ರಹ ಸ್ಥಳದಲ್ಲಿ ರೈತರನ್ನ ಉದ್ದೇಶಿಸಿ ಮಾತನಾಡಿದರು.

ಸಮಗ್ರ ನಗರ ಯೋಜನೆಯ ಭೂಸ್ವಾಧೀನವನ್ನು ವಿರೋಧಿಸಿ ಐದು ದಿನಗಳಿಂದ ಉಪವಾಸ ಸತ್ಯಾಗ್ರಹ ಮಾಡಿದರೂ ರೈತರ ಸಮಸ್ಯೆಯನ್ನು ಆಲಿಸಿಲ್ಲ. ಈ ಸರ್ಕಾರಕ್ಕೆ ಕಣ್ಣು ಕಾಣುತ್ತಿಲ್ಲ, ಕಿವಿಯೂ ಕೇಳುತ್ತಿಲ್ಲ. ರೈತರು ದೇವೇಗೌಡರು ಬರುವವರೆಗೂ ಉಪವಾಸ ಸತ್ಯಾಗ್ರಹವನ್ನು ಮುಂದುವರೆಸುತ್ತೇವೆ ಎಂದು ಹೇಳುತ್ತಿದ್ದಾರೆ. ಭಾನುವಾರ ದೇವೇಗೌಡರನ್ನು ಕರೆಸುವ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.

### ಕಾನೂನು ಹೋರಾಟಕ್ಕೆ ಸರ್ಕಾರದ ಅಡ್ಡಿ

ಯೋಜನೆ ವಿರುದ್ಧ ಕಾನೂನಾತ್ಮಕ ಹೋರಾಟ ಕೂಡ ನಡೆಯುತ್ತಿದೆ. ಸೆ. 29ರಂದು ಈ ಬಗ್ಗೆ ವಿಚಾರಣೆ ಇದೆ. ಆದರೆ ಸರ್ಕಾರ ಆಕ್ಷೇಪಣೆ ಸಲ್ಲಿಸದೆ ವಿಳಂಬ ಮಾಡುತ್ತಿದೆ. ಕೋರ್ಟ್‌ನಲ್ಲಿ ವಾದ ಆರಂಭವಾದರೆ ಸರ್ಕಾರಕ್ಕೆ ಹಿನ್ನಡೆಯಾಗುತ್ತದೆ ಎಂದು ವಿಳಂಬ ಮಾಡುತ್ತಿದೆ. ಸರ್ಕಾರ ಸಮಿತಿ ರಚನೆ ಮಾಡಿ ಒಂದು ತಿಂಗಳಾಗಿದೆ, ಇನ್ನೂ ಸ್ಥಳಕ್ಕೆ ಬಂದು ರೈತರ ಅಭಿಪ್ರಾಯ ಸಂಗ್ರಹಿಸಿಲ್ಲ. ಆ ಸಮಿತಿಯ ವರದಿ ಏನು ಬರಬಹುದು ಎಂದು ಎಲ್ಲರಿಗೂ ಗೊತ್ತು. ಸಮಿತಿ ರಚನೆ ಮಾಡಿ ಸರ್ಕಾರ ನಾಟಕವಾಡುತ್ತಿದೆ ಎಂದರು.

### ಅಧಿವೇಶನದಲ್ಲಿ ಬಿಡದಿ ಚರ್ಚೆಗೆ ಅವಕಾಶ ಕೊಡಲಿಲ್ಲ

ಅಧಿವೇಶನದಲ್ಲಿ ಬಿಡದಿ ಕುರಿತು ಪ್ರಸ್ತಾಪ ಮಾಡಲು ಅವಕಾಶ ನೀಡಲಿಲ್ಲ. ಒಬ್ಬ ಭ್ರಷ್ಟನನ್ನು ರಕ್ಷಣೆ ಮಾಡಲು ಕಾಂಗ್ರೆಸ್ ಇಡೀ ಸದನವನ್ನು ಹಾಳು ಮಾಡಿತು. ಅದೇ ವಿಚಾರಕ್ಕಾಗಿ ಸಂಪೂರ್ಣ ಸದನ ಹಾಳಾಯಿತು. ಬೇರೆ ವಿಷಯ ಪ್ರಸ್ತಾಪ ಮಾಡುವುದಕ್ಕೆ ಸರ್ಕಾರ ಅವಕಾಶ ಕೊಡಲಿಲ್ಲ. ಚರ್ಚೆ ಮಾಡುವುದಕ್ಕೆ ನಮ್ಮ ಶಾಸಕರು ಸಿದ್ಧರಾಗಿದ್ದರು, ಆದರೆ ಅವಕಾಶ ಸಿಗಲಿಲ್ಲ ಎಂದು ಆರೋಪಿಸಿದರು.



### ಸರ್ಕಾರಕ್ಕೆ ಹೃದಯವೇ ಇಲ್ಲ

ರಾಜ್ಯ ಸರ್ಕಾರಕ್ಕೆ ಹೃದಯವೇ ಇಲ್ಲ, ರೈತರ ಕಣ್ಣೀರು ಕಾಣುತ್ತಿಲ್ಲ. ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಇದೆ. ಮೂರುವರೆ ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಒಬ್ಬ ರೈತನ ಪರಿಸ್ಥಿತಿಯನ್ನು ಆಲಿಸಲು ಸರ್ಕಾರ ಮುಂದಾಗಿಲ್ಲ. ಹಿಂದೆ ಕುಮಾರಣ್ಣನವರು ರೈತರ ಕಷ್ಟ ನೋಡಿ ಸಾಲಮನ್ನಾ ಮಾಡಿದರು. ಆಗ ಇದು ರಾಹುಲ್ ಗಾಂಧಿ ಅವರ ಕನಸು ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಈಗ 136 ಸ್ಥಾನಗಳನ್ನು ಗೆದ್ದಿದ್ದೀರಲ್ಲ, ಕಡಿದು ಕಟ್ಟೆ ಹಾಕುತ್ತೀರಾ? ಈಗ ರೈತರ ಸಾಲಮನ್ನಾ ಮಾಡುವುದಿಲ್ಲವೇ? ಈಗ ರಾಹುಲ್ ಗಾಂಧಿ ಹೇಳುತ್ತಿಲ್ಲವೇ? ಎಂದು ಪ್ರಶ್ನಿಸಿದರು.

### ಕುಮಾರಣ್ಣ ಕೇಂದ್ರ ಕಡೆ ಬೊಟ್ಟು ಮಾಡಲಿಲ್ಲ

ಕುಮಾರಣ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ 26 ಸಾವಿರ ಕೋಟಿ ರೂ. ರೈತರ ಸಾಲ ಮನ್ನಾ ಮಾಡಿದರು. ಆಗ ಕೇಂದ್ರದ ಕಡೆ ಕೈ ತೋರಿಸಿ ಸುಮ್ಮನೆ ಕುಳಿತಿರಲಿಲ್ಲ. ಈಗಿನ ಮುಖ್ಯಮಂತ್ರಿಗಳು 60:40, 35:65, 50:50 ಎಂದು ಅನುಪಾತ ಮಾತನಾಡುತ್ತಿದ್ದಾರೆ. ಇವರು ನಾಡಿನ ಮುಖ್ಯಮಂತ್ರಿಯೇ ಅಥವಾ ಒಬ್ಬ ರಿಯಲ್ ಎಸ್ಟೇಟ್ ಕಂಪನಿಯ ಸಿಇಒನೇ? ಎಂದು ಪ್ರಶ್ನಿಸಿ, ಸರ್ಕಾರಕ್ಕೆ ನಿಖಿಲ್ ಕುಮಾರಸ್ವಾಮಿ ಅವರು ಚಾಟಿ ಬೀಸಿದರು.

### ಎಷ್ಟು ಜನಕ್ಕೆ ಪರಿಹಾರ ನೀಡಿದ್ದೀರಿ ಎಂದು ಶ್ವೇತಪತ್ರ ಹೊರಡಿಸಿ*

ರಾಜ್ಯ ಸರ್ಕಾರ ರೈತರಿಗೆ ಕೇವಲ 2500 ರೂ. ಪರಿಹಾರ ನೀಡಿ ಮೂಗಿಗೆ ತುಪ್ಪ ಸವರುವ ಕೆಲಸ ಮಾಡುತ್ತಿದೆ. ಬಿತ್ತನೆ ಬೀಜ, ರಸಗೊಬ್ಬರದ ಬೆಲೆ ಸರ್ಕಾರಕ್ಕೆ ಗೊತ್ತಿದೆಯೇ? ಪರಿಹಾರ ಕೊಡಲು ಕೇಂದ್ರದ ಕಡೆ ಭಿಕ್ಷೆ ಬೇಡುತ್ತಿದ್ದಾರೆ ಎಂದು ನಿಖಿಲ್ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ನ್ಯಾಯಾಲಯಕ್ಕೆ ಹೆದರಿ ಜಿಲ್ಲಾಧಿಕಾರಿಗಳು ನಿನ್ನೆ ಬಂದು ಹೋಗಿದ್ದಾರೆ. ಈ ಕಾನೂನು ಹೋರಾಟದಲ್ಲಿ ನಿಮಗೆ ಜಯ ಸಿಕ್ಕೇ ಸಿಗುತ್ತದೆ. ಸಂಪೂರ್ಣ ಯೋಜನೆಗೆ ತಡೆಯಾಜ್ಞೆ ಸಿಗುವ ಸಾಧ್ಯತೆ ಇದೆ. ಜಿಬಿಡಿಎ ಬಳಿ ಹಣವೇ ಇಲ್ಲ, ಹುಡ್ಕೋದಿಂದ ಸಾಲಕ್ಕೆ ಅರ್ಜಿ ಹಾಕಿದ್ದಾರೆ. ಇಲ್ಲಿಯವರೆಗೂ ಎಷ್ಟು ಜನಕ್ಕೆ ಪರಿಹಾರ ನೀಡಿದ್ದೀರಿ ಎಂದು ಶ್ವೇತಪತ್ರ ಹೊರಡಿಸಿ. ಈ ಯೋಜನೆಯ ಪಿತಾಮಹ ಕಾಂಗ್ರೆಸ್‌ನವರು. ಈಗ ಕುಮಾರಸ್ವಾಮಿ ಅವರ ಮೇಲೆ ಗೂಬೆ ಕೂರಿಸುವ ಕೆಲಸ ನಡೆಯುತ್ತಿದೆ.

### ಉಪವಾಸ ಮಾಡಿ ಆರೋಗ್ಯ ಕೆಡೆಸಿಕೊಳ್ಳಬೇಡಿ

ಈ ಬಿಡದಿ ಯೋಜನೆ ಬಗ್ಗೆ ದೇವೇಗೌಡರು ಎಲ್ಲ ಮಾಹಿತಿ ಪಡೆಯುತ್ತಿದ್ದಾರೆ. ಯೋಜನೆಗೆ ತಡೆಯಾಜ್ಞೆ ಸಿಗುತ್ತಿಲ್ಲ, ನಾನೇ ಹೋರಾಟಕ್ಕೆ ಬರಬೇಕೇ ಎಂದು ಕೇಳುತ್ತಿದ್ದಾರೆ. ದಯಮಾಡಿ ಯಾರೂ ಉಪವಾಸ ಮಾಡಿ ಆರೋಗ್ಯ ಕೆಡಿಸಿಕೊಳ್ಳಬೇಡಿ. ಈಗಾಗಲೇ ನಾಲ್ಕು ಜನ ಅಸ್ವಸ್ಥರಾಗಿದ್ದಾರೆ. ದಯಮಾಡಿ ಉಪವಾಸ ಸತ್ಯಾಗ್ರಹವನ್ನು ಕೈಬಿಡಿ" ಎಂದು ಮನವಿ ಮಾಡಿದರು.

### ಸ್ಥಳಕ್ಕೆ ದೇವೇಗೌಡರು ಬರುವಂತೆ ಆಗ್ರಹ

ಈ ವೇಳೆ ರೈತರು ದೇವೇಗೌಡರನ್ನು ಬೈರಮಂಗಲ ಗ್ರಾಮಕ್ಕೆ ಕರೆಸುವಂತೆ ಒತ್ತಾಯಿಸಿ, "ಬರಲೇ ಬೇಕು, ಬರಲೇ ಬೇಕು, ದೇವೇಗೌಡರು ಬರಲೇಬೇಕು" ಎಂದು ಘೋಷಣೆ ಕೂಗಿದರು. ಇದಕ್ಕೆ ಪ್ರತಿಕ್ರಿಯಿಸಿದ ನಿಖಿಲ್ ಕುಮಾರಸ್ವಾಮಿ ಅವರು "ದೇವೇಗೌಡರು ಬರುತ್ತಾರೆ" ಎಂದು ಭರವಸೆ ನೀಡಿದರು.

### ನಾನು ಜೈಲಿಗೆ ಹೋಗಲು ಸಿದ್ಧ – ಎಚ್.ಡಿ.ದೇವೇಗೌಡ

ಬಿಡದಿ ಭೂಸ್ವಾಧೀನ ವಿರೋಧಿಸಿ ಬೈರಮಂಗಲದಲ್ಲಿ ರೈತರು ನಡೆಸುತ್ತಿರುವ ಅಹೋರಾತ್ರಿ ಉಪವಾಸ ಸತ್ಯಾಗ್ರಹಕ್ಕೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ದೂರವಾಣಿ ಮೂಲಕ ಕರೆ ಮಾಡಿ ಮಾತನಾಡಿದರು. ದೇವೇಗೌಡರ ಸಂಭಾಷಣೆಯನ್ನು ಧ್ವನಿವರ್ಧಕದ ಮೂಲಕ ನಿಖಿಲ್ ಪ್ರಸಾರ ಪಡಿಸಿದರು. ರೈತರ ಭೂಮಿ ಉಳಿಸಲು ನಾನು ನಿಮ್ಮ ಜೊತೆ ಇರ್ತೇನೆ... ಈ ವಿಚಾರದಲ್ಲಿ ನಾನು ಜೈಲಿಗೆ ಹೋಗಲಿಕ್ಕೂ ತಯಾರಾಗಿದ್ದೇನೆ". "ನಿಮ್ಮ ಭೂಮಿ ಉಳಿಸಲು ಯಾವುದೇ ತ್ಯಾಗಕ್ಕೂ ನಾನು ಸಿದ್ಧ, ಹೆದರಬೇಡಿ ಎಂದು ಅಭಯ ನೀಡಿದರು."

### ಸರ್ಕಾರ ಹೇಳಿದಂತೆ ವರದಿ ತಯಾರಾಗುತ್ತೆ

ಬಿಡದಿ ಸಮಗ್ರ ನಗರ ಯೋಜನೆಗೆ ಭೂಸ್ವಾಧೀನವನ್ನು ವಿರೋಧಿಸಿ ಬೈರಮಂಗಲದಲ್ಲಿ ಹಲವಾರು ತಿಂಗಳುಗಳಿಂದ ಪ್ರತಿಭಟನೆ ನಡೆಯುತ್ತಿದೆ. ಸಿಎಂ ಡಿ.ಕೆ.ಶಿವಕುಮಾರ್ ಸಾಧಕ ಬಾಧಕಗಳನ್ನು ತಿಳಿದುಕೊಳ್ಳಲು ಸಮತಿ ರಚಿಸುವುದಾಗಿ ಹೇಳಿದ್ದಾರೆ. ಶುಕ್ರವಾರ ಬೈರಮಂಗಲಕ್ಕೆ ಭೇಟಿ ನೀಡಿದ್ದ ನಿಖಿಲ್ ಕುಮಾರಸ್ವಾಮಿ ಸಮಿತಿ ವಿಚಾರದಲ್ಲಿ ಮಾಧ್ಯಮ ಪ್ರತಿನಿಧಿಗಳ ಬಳಿ ಮಾತನಾಡಿದರು. ಆರ್ಥಿಕ–ಸಾಮಾಜಿಕ ಸಮಸ್ಯೆಗಳು ಏನಿದೆ, ಸಾಲಕ–ಬಾಲಕಗಳು ಏನಿದೆ, ಇವೆಲ್ಲವೂ ಕೂಡ ನಾವು ಆ ಸಮಿತಿಯ ಮೂಲಕ ಪರಿಶೀಲನೆ ಮಾಡಿಸಿ ವರದಿ ತರೆಸಿಕೊಳ್ತೀವಿ ಅಂತ ಹೇಳ್ತಾ ಇದ್ದಾರೆ. ನಾನು ಮೊದಲನೇ ದಿನವೇ ಹೇಳಿದ್ದೇನೆ, ಇವತ್ತು ಅದನ್ನೇ ಹೇಳ್ತಾ ಇದ್ದೇನೆ. ಆ ವರದಿಯಲ್ಲಿ ಏನು ಪ್ರಕಟ ಆಗುತ್ತೆ ಅನ್ನೋದು ಎಲ್ಲರಿಗೂ ಗೊತ್ತಿದೆ. ಸರ್ಕಾರದಲ್ಲಿ ಯಾವ ರೀತಿಯಾದಂತಹ ವರದಿ ತಯಾರು ಮಾಡಿ ಅಂತಾರೋ, ಆ ರೀತಿಯಾದಂತಹ ವರದಿ ತಯಾರಾಗುತ್ತದೆ. ಇದು ಬಹಳ ಸ್ಪಷ್ಟ ಎಂದರು.

## ಮೊದಲ ಪುಟದಿಂದ

### ಸಿದ್ದು ಆರ್ಮಿ ಛಿದ್ರವಾಗಿಲ್ಲ

ಈಗಲೂ ಅಷ್ಟೇ ಎಂದು ವದಂತಿಗಳಿಗೆ ತೆರೆ ಎಳೆದರು.

ಇಡಿ ದಾಳಿ ನಂತರ ಯತೀಂದ್ರ ಸಿದ್ದರಾಮಯ್ಯ ನನ್ನನ್ನು ಭೇಟಿಯಾಗಿದ್ದರು. ಮನೆಯಲ್ಲಿ ಒಬ್ಬರು ಸಾಂತ್ವಾನ ಹೇಳಿದರೆ ಸಾಕು. ಎಲ್ಲರೂ ನಮಗೆ ಸಾಂತ್ವಾನ ಹೇಳಬೇಕೆಂದು ಬಯಸಬಾರದು. ಯಾರದರೂ ಮದುವೆಗೆ, ಗೃಹ ಪ್ರವೇಶಕ್ಕೆ ಮನೆಯಿಂದ ಒಬ್ಬರು ಹೋಗುತ್ತಾರೆ. ಎಲ್ಲರೂ ಬರಬೇಕೆಂದು ನಿರೀಕ್ಷೆ ಮಾಡಿದರೆ ಹೇಗೆ? ಎಂದು ಪ್ರಶ್ನೆ ಮಾಡಿದರು.

### ವಿಪಕ್ಷಗಳಿಂದ ರಾಜಕೀಯ

ನೋಡಬೇಕು. ಕಳೆದ ಬಾರಿ 18 ಸಾವಿರ ಕೋಟಿ ಬಂದಿತ್ತು. ಈ ಬಾರಿ ಎಷ್ಟು ಬರುತ್ತೆ ಗೊತ್ತಿಲ್ಲ. ನಿಯಮದ ಪ್ರಕಾರ ಎಷ್ಟು ನಷ್ಟ ಆಗುತ್ತೋ ಅಷ್ಟು ಕೇಂದ್ರಕ್ಕೆ ಕೇಳ್ತೀವಿ ಎಂದರು.

ಬರ ನಷ್ಟ ಲೆಕ್ಕಾಚಾರ ಮಾಡಲು ಕೇಂದ್ರ ಸರ್ಕಾರ ಒಬ್ಬ ಐಎಎಸ್ ಅಧಿಕಾರಿಯನ್ನ ನೇಮಕ ಮಾಡಿದ್ದಾರೆ. ನಮಗೆ ಲೆಟರ್ ಬರೆದಿದ್ದಾರೆ ಇಂತಹವರನ್ನು ಕಳಿಸ್ತಾ ಇದ್ದೀವಿ ಅಂತ. ಯಾವಾಗ ಕಳಿಸ್ತಾರೆ ಅಂತ ಡೇಟ್ ಫಿಕ್ಸ್ ಆಗಿಲ್ಲ. ಟೀಂ ಬಂದು ಹೇಗೆ ಅಸೆಸ್ ಮಾಡ್ತಾರೆ, ಅವರ ಗೈಡ್ ಲೈನ್ಸ್ ಪ್ರಕಾರ ಮಾಡಿದಾಗ ಎಷ್ಟು ಅಂತ ಗೊತ್ತಾಗುತ್ತದೆ ಅಂತ ತಿಳಿಸಿದರು.

### ಪೌರಕಾರ್ಮಿಕ ಮಂಡಳಿ ಸ್ಥಾಪಿಸಿ

ಬಡಾವಣೆ ನಿರ್ಮಿಸಿ ಅದಕ್ಕೆ ಐಪಿಡಿ ಸಾಲಪ್ಪ ಅವರ ಹೆಸರಿಡಬೇಕು. ಬಿ.ಬಸವಲಿಂಗಪ್ಪ ಅವರ ಹೆಸರಿನಲ್ಲಿ ಪೌರ ಕಾರ್ಮಿಕರಿಗೆ ಪ್ರಶಸ್ತಿ ನೀಡಬೇಕು ಎಂದು ಕೋರಿದರು.

### ಶ್ರೀರಂಗಪಟ್ಟಣ ದಸರಾ ಉದ್ಘಾಟಿಸುವ 'ಕ್ರೇಜಿಸ್ಟಾರ್'

ಜನಪ್ರಿಯತೆಯೂ ಸೇರ್ಪಡೆಯಾಗಲಿದೆ. ರವಿಚಂದ್ರನ್ ಅವರು ಈ ಆಹ್ವಾನವನ್ನು ಸ್ವೀಕರಿಸಿದ್ದಾರೆ.

ಶ್ರೀರಂಗಪಟ್ಟಣ ದಸರಾ ಉತ್ಸವ ಅಕ್ಟೋಬರ್ 15ರಿಂದ 18ರವರೆಗೆ ನಾಲ್ಕು ದಿನ ನಡೆಯಲಿದೆ. ಕಿರಂಗೂರಿನ ಬನ್ನಿಮಂಟಪದಲ್ಲಿ ಅ.15ರಂದು ಆನೆಯ ಮೇಲಿರುವ ಚಾಮುಂಡೇಶ್ವರಿ ದೇವಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ರವಿಚಂದ್ರನ್ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ.

ಮೈಸೂರು ದಸರಾ ಮಹೋತ್ಸವಕ್ಕೆ ಮೂಲ ಬುನಾದಿ ಶ್ರೀರಂಗಪಟ್ಟಣ ದಸರಾ. ಕ್ರಿ.ಶ.1610ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನದ ನಂತರ, ರಾಜ ಒಡೆಯರ್ ಅವರು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇಲ್ಲಿಯೇ ಮೊದಲ ಬಾರಿಗೆ ದಸರಾವನ್ನು ಅಧಿಕೃತವಾಗಿ ಪ್ರಾರಂಭಿಸಿದ್ದರು.

### ತಾಲೀಮಿಗೆ ಮಳೆ ವಿಘ್ನ

ಹಂತವಾಗಿ ತಯಾರಿ ಮಾಡಲಾಗುತ್ತಿದೆ. ಧನಂಜಯ, ಪ್ರಶಾಂತ, ಸುಗ್ರೀವ, ಏಕಲವ್ಯ ಐದು ಆನೆಗಳಿಗೂ ತಾಲೀಮು ನಡೆಸಲಾಗುತ್ತಿದೆ. ಎಲ್ಲವೂ ಅಂಬಾರಿ ಹೊರಲು ಸಿದ್ಧವಾಗಿವೆ. ಯಾವುದು ಅಂಬಾರಿ ಆನೆ ಎಂಬುದು ಇನ್ನೂ ತೀರ್ಮಾನ ಆಗಿಲ್ಲ ಎಂದು ಹೇಳಿದರು.

### ಇಡಿ ನೋಟಿಸ್ ನೀಡಿದರೆ ಉತ್ತರ

ಬಿಜೆಪಿ ಹಾಗೂ ಮಿತ್ರ ಪಕ್ಷಗಳವರ ಮೇಲೆ ಒಂದು ದಾಳಿಯೂ ಆಗಿಲ್ಲ. ವಿರೋಧ ಪಕ್ಷದವರ ಮೇಲಷ್ಟೆ ನಡೆಸಲಾಗುತ್ತಿದೆ ಎಂದು ದೂರಿದರು.

### ಫಿರಂಗಿ ಗಾಡಿಗಳಿಗೆ ಪೂಜೆ

ಗಾಡಿಗಳ ಮೂಲಕ ತಲಾ 3 ಬಾರಿಯಂತೆ ಒಟ್ಟು 21 ಬಾರಿ ಗೌರವ ರಕ್ಷೆಯಾಗಿ ಕುಶಾಲತೋಪು ಸಿಡಿಸಲಾಗುತ್ತದೆ. ಇದಕ್ಕಾಗಿ ಮೈಸೂರು ನಗರ ಸಶಸ್ತ್ರ ಮೀಸಲು ಪಡೆ ಪೊಲೀಸರು ನಡೆಸಲಿರುವ ಕುಶಾಲತೋಪು ಪೂರ್ವಾಭ್ಯಾಸಕ್ಕೂ ಮುನ್ನ ಪಿರಂಗಿ ಗಾಡಿಗಳಿಗೆ ಪೂಜೆ ನೆರವೇರಿದೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಮಾತನಾಡಿ, ದಸರೆ ಜಂಬೂ ಸವಾರಿ ಪ್ರಾರಂಭದ ಸಂದರ್ಭ ಕುಶಾಲ ತೋಪು ಸಿಡಿಸಲಾಗುತ್ತದೆ. ಈ ವೇಳೆ ಗಜಪಡೆ ಆನೆ, ಅಶ್ವಗಳು ಹೆದರಿದಿರಲು ಪ್ರತಿ ಬಾರಿಯೂ ಕುಶಾಲ ತೋಪು ಸಿಡಿಸುವ ತಾಲೀಮು ನಡೆಸಲಾಗುತ್ತದೆ. ಇದಕ್ಕಾಗಿ ನಮ್ಮ 25 ನುರಿತ ಸಿಬ್ಬಂದಿಯನ್ನು ಸಜ್ಜುಗೊಳಿಸಲಾಗಿದೆ ಎಂದು ಹೇಳಿದರು. ಡಿಸಿಪಿ ಸುಂದರರಾಜ್, ಅರಮನೆ ಆಡಳಿತ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಉಪಸ್ಥಿತರಿದ್ದರು.

# ಮೊಬೈಲ್‌ಗಿಂತ ಜೀವನ ದೊಡ್ಡದು: ಎಂ.ಮರಿಸ್ವಾಮಿ

## ಸುಗ್ಗನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು: ಪ್ರಥಮ ಪಿಯೂ ವಿದ್ಯಾರ್ಥಿಗಳಿಗೆ ಸ್ವಾಗತ

ರಾಮನಗರ: ಮೊಬೈಲ್ ಗಿಂತ ಜೀವನ ದೊಡ್ಡದು. ಪುಸ್ತಕ ಓದುವ ಅಭಿರುಚಿ ಅಗತ್ಯ. ಮೊಬೈಲ್ ಬಳಕೆಯಲ್ಲಿನ ವೈವಿಧ್ಯ ಆಫ್ ಗಳು ಮನಸ್ಸನ್ನು ದಿಕ್ಕೆಡಿಸುತ್ತವೆ. ಸಾಮಾಜಿಕ ಜಾಲತಾಣಗಳು ನಮ್ಮನ್ನು ಯಾಮಾರಿಸಿ, ಸಂಕಟಗಳ ಸುಳಿಗೆ ದೂಡುತ್ತವೆ. ಪ್ರತಿ ವಿದ್ಯಾರ್ಥಿಯು ಮೊಬೈಲ್ ವ್ಯಸನದಿಂದ ಹೊರಬಂದು ಗುರುಗಳು ಹಾಗೂ ತಂದೆ ತಾಯಿಗಳ ಮಾತನ್ನು ಕೇಳಿ. ಚೆನ್ನಾಗಿ ಓದಬೇಕು ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಮರಿಸ್ವಾಮಿ ಕರೆ ನೀಡಿದರು.

ತಾಲ್ಲೂಕಿನ ಸುಗ್ಗನಹಳ್ಳಿ ಗ್ರಾಮದಲ್ಲಿರುವ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಪ್ರಥಮ ಪಿಯು ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಬಾಲ್ಯದಲ್ಲಿ ಚುರುಕಿಲ್ಲದ ಎ. ಕೆ.ರಾಮಾನುಜನ್ ಗಣಿತದ ಸೂತ್ರವನ್ನು ಕಂಡುಹಿಡಿದು ಪದ್ಮಶ್ರೀ ಪಾರಿತೋಷಕ ಪಡೆದರು. ಆದರೆ ಆತ 10 ನೇ ತರಗತಿಯಲ್ಲಿ ಅನುತ್ತೀರ್ಣನಾಗಿರುತ್ತಾರೆ. ನಾವು ಫೆಲ್ ಆದರೆ, ಆತ್ಮಹತ್ಯೆ ಮಾಡ್ಕೊತಿವಿ. ಧೈರ್ಯ ಮತ್ತು ದೃಢತೆಯಿಂದ ಗೆಲ್ಲಬೇಕು. ನಕಾರಾತ್ಮಕವಾಗಿ ಯೋಚಿಸಬಾರದು. ಧೈರ್ಯವನ್ನು ನೀವೇ ತೆಗೆದುಕೊಳ್ಳಬೇಕು. ಮತ್ಯಾರೋ ಬಂದು ಕೊಡಲಾಗಲ್ಲ. ಆತ್ಮ ವಿಶ್ವಾಸ ದಿಂದ ಕಠಿಣ ಸಂದರ್ಭವನ್ನು ಎದುರಿಸಬೇಕು. ಶಿಕ್ಷಣ ಕೇವಲ ಉದ್ಯೋಗ ಗಳಿಸೋದಕ್ಕಲ್ಲ. ಸಮಸ್ಯೆಗಳು ಬಂದಾಗ ಶಿಕ್ಷಕರಿಗೆ, ಪೋಷಕರಿಗೆ ತಿಳಿಸಿ. ಪರಿಹರಿಸಿಕೊಳ್ಳಬೇಕು. ನೀವೇ ಕೊರಗಿ ಅನಾಹುತ ಮಾಡಿಕೊಳ್ಳಬೇಡಿ. ಕೆಲವೊಮ್ಮೆ ತಂದೆ, ತಾಯಿ ಹಾಗೂ ಗುರುಗಳು ಬೈಯ್ಯಬಹುದು. ತಿದ್ದಿಕೊಳ್ಳಲು ಹೇಳಿದ್ದಾರೆ ಎಂದು ಬದಲಾವಣೆ ಮಾಡಿಕೊಳ್ಳಿ ಎಂದರು.

ನಿವೃತ್ತ ಶಿಕ್ಷಕ ಕೃಷ್ಣಪ್ಪ ಅವರು ಮಾತನಾಡಿ. ಸದುದ್ದೇಶ ಮತ್ತು ಅತ್ಯುತ್ತಮ ಗುರಿಯಿಟ್ಟು ಓದುವ, ಅಭ್ಯಾಸ ಮಾಡಿದಲ್ಲಿ ಉತ್ತಮ ಸಾಧನೆ ಮಾಡುತ್ತೀರಿ. ಈ ನೆಲದ ಪರಿಸರ ಮತ್ತು ಸಾಮಾಜಿಕ ಸಂಸ್ಥೆಗಳ ನಿವಾರಣೆಗೆ ವಿದ್ಯಾರ್ಥಿಗಳು ಶಕ್ತಿಮೀರಿ ಪ್ರಯತ್ನ ಮಾಡಬೇಕು ಎಂದರು. ಪ್ರಾಂಶುಪಾಲ ಎಂ.ಎನ್. ಪ್ರದೀಪ್, ಸಿಡಿಸಿ ಉಪಾಧ್ಯಕ್ಷ ರವಿಚಂದ್ರೇಗೌಡ, ಸಿಡಿಸಿ ಸದಸ್ಯ ಪ್ರಕಾಶ್, ಉಪನ್ಯಾಸಕರುಗಳಾದ ದೇವರಾಜು, ಚಂದ್ರಶೇಖರ್, ಸುರೇಶ್ ಕುಮಾರ್, ಚಂದ್ರು ಮೊದಲಾದವರು ಹಾಜರಿದ್ದರು.



### ಸ್ವತಂತ್ರವಾಗಿ ಆಲೋಚನೆ ಮಾಡುವುದನ್ನು ಬೆಳೆಸಿಕೊಳ್ಳಿ

ಕನ್ನಡ ಉಪನ್ಯಾಸಕ ಡಾ.ಡಿ.ಆರ್ ದೇವರಾಜ್ ಮಾತನಾಡಿ ಅಂಕಗಳಿಕೆ ಮಾಡುವುದು ಮುಖ್ಯ. ಅದರ ಜೊತೆಗೆ ಗುಣಾತ್ಮಕ ಜೀವನವನ್ನು ರೂಪಿಸಿಕೊಳ್ಳಬೇಕು. ವೈಜ್ಞಾನಿಕ ಹಾಗೂ ಸ್ವತಂತ್ರ ಆಲೋಚನೆ ಮಾಡುವುದನ್ನು ಬೆಳೆಸಿಕೊಳ್ಳಿರಿ. ಎಲ್ಲವನ್ನು ಓದುತ್ತಿವಿ. ಆದ್ರೆ ಮನೆಯಲ್ಲಿ ಮೌಢ್ಯವನ್ನು ಆಚರಣೆ ಮಾಡುತ್ತಿದ್ದೇವೆ. ವಿದ್ಯಾರ್ಥಿ ಯಾವುದನ್ನು ಆಯ್ಕೆ ಮಾಡಿಕೋಬೇಕು ಎನ್ನುವ ನಿರ್ಣಯ ಕೈಗೊಳ್ಳುವ ಅದನ್ನು ಆಚರಣೆಗೆ ತರುವ ಪ್ರಯತ್ನ ಮಾಡಿ ಯಶಸ್ಸು ಗಳಿಸಿ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

### ಸ್ಪರ್ಧೆ ವ್ಯಾಪಕವಾಗಿದೆ

ಅನೇಕ ಕ್ಷೇತ್ರಗಳು ಖಾಸಗೀಕರಣ ಆಗುತ್ತಿವೆ. ಸ್ಪರ್ಧೆ ವ್ಯಾಪಕವಾಗಿದೆ. ಕೌಶಲ್ಯಗಳನ್ನು ಬೆಳೆಸಿಕೊಳ್ಳಿರಿ. ಕೌಶಲ್ಯತೆ ಹೊಸತನ ಕಲಿಕೆ. ಕಂಪ್ಯೂಟರ್ ಕಲಿಯಿರಿ. ಚಾಟ್ ಜಿ.ಪಿ.ಟಿ ಬಂದಿದೆ. ಪುಸ್ತಕ ಓದಿದ್ರೆ ಸಾಲಲ್ಲ. ಹೊಸ ತಂತ್ರಜ್ಞಾನದ ಕೌಶಲ್ಯತೆಯನ್ನು ಬಳಸಿ, ವೇಗದ ಕೆಲಸ ಮಾಡುವ ಕಲೆ ಬೇಕು. ವಿಜ್ಞಾನ ವಿಭಾಗದವರಿಗೆ ಇಂಜಿನಿಯರ್ ಹಾಗೂ ವೈದ್ಯರಾಗುವ ಅವಕಾಶಗಳಿವೆ. ಇವೆರಡನ್ನು ಬಿಟ್ಟು ಉಳಿದೆಲ್ಲಾ ಕ್ಷೇತ್ರಗಳ ಅವಕಾಶ ಕಲಾ ಮತ್ತು ವಾಣಿಜ್ಯ ವಿಭಾಗಗಳಿಗೂ ಲಭ್ಯವಾಗುತ್ತವೆ. ನಿರ್ಧಿಷ್ಟ ಗುರಿ ಇಟ್ಟು ಮುಂದೆ ಸಾಗಿ. ಅರ್ಜುನನ ಗುರಿಯನ್ನು ಉದಾ ತೆಗೆದುಕೊಳ್ಳಿ ಎಂದು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು. ಚಂಚಲ ಮನಸ್ಸನ್ನು ನಿಗ್ರಹಿಸುವಿಕೆ ಬಹಳ ಮುಖ್ಯ. ಏಕಾಗ್ರತೆ ಶೇ.100 ರಷ್ಟು ಇಟ್ಟು, ಓದಿದ್ರೆ ಗುರಿ ಮುಟ್ಟಿ, ಯಶಸ್ವಿಯಾಗುವಿರಿ. ಇಲ್ಲದಿದ್ದರೆ ಓದು ಅರ್ಧಕ್ಕೆ ನಿಲ್ಲುತ್ತೆ, ಉದ್ಯೋಗ ವರಮಾನ ಗಳಿಸಲು ಕಷ್ಟವಾಗುತ್ತದೆ ಎಂದು ಬುದ್ಧಿ ಮಾತು ಹೇಳಿದರು.

### ಶಿಸ್ತು ಮತ್ತು ಶ್ರದ್ಧೆಯಿಂದ ಅಧ್ಯಯನ ಮಾಡಿ

ಪ್ರಾಂಶುಪಾಲರ ಸಂಘದ ಜಿಲ್ಲಾ ಅಧ್ಯಕ್ಷ ಡಾ.ದೊಡ್ಡಬೋರಯ್ಯ ಮಾತನಾಡಿ ಸಾಮಾನ್ಯ ವಿದ್ಯಾರ್ಥಿಗಳು ಶಿಸ್ತು ಮತ್ತು ಶ್ರದ್ಧೆಯಿಂದ ಅಧ್ಯಯನ ಮಾಡಿದರೆ ಅನೇಕ ಕ್ಷೇತ್ರಗಳಲ್ಲಿ ಸಾಧಕರಾಗುತ್ತಿರಿ. ಸಿನಿಮಾ ನಟರು, ರಾಜಕೀಯ ನಾಯಕರು, ಅಧಿಕಾರಿಗಳು ಆಗುವುದಕ್ಕೆ ನಿರಂತರ ಓದು ಅವಶ್ಯ. ಪಠ್ಯದ ಜೊತೆಗೆ ಸಾಮಾನ್ಯ ಜ್ಞಾನವನ್ನು ತಿಳಿದುಕೊಂಡು, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ವಿಯಾಗಲು ಸಾಧ್ಯ ಎಂದರು.

### ಸಾಮಾಜಿಕ ಜೀವನದಲ್ಲಿ ಪ್ರಾಮಾಣಿಕತೆ ಇರಲಿ

ಲೇಖಕ ಜೆ.ಶಿವಣ್ಣ ಕೊತ್ತಿಪುರ ಮಾತನಾಡಿ ದೈಹಿಕ ಬಲ ದೊಂದಿಗೆ ಮನೋಬಲವನ್ನು ಬೆಳೆಸುವುದೇ ಶಿಕ್ಷಣದ ಮೂಲ ಉದ್ದೇಶ. ಸಾಮಾಜಿಕ ಬದುಕಿನಲ್ಲಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಮುಖ್ಯ. ಆದರೆ ಆಡಳಿತಶಾಹಿಯಲ್ಲಿ, ಶಿಕ್ಷಿತ ಸಮುದಾಯದಲ್ಲಿ ನೈತಿಕತೆ ಮತ್ತು ಮಾನವೀಯತೆ ಕ್ಷೀಣಿಸುತ್ತಿರುವುದು ಆತಂಕದ ಸಂಗತಿಯಾಗಿದೆ, ಸಮಾಜೋದ್ಧಾರದ ಕನಸು ಕಾಣುವ ನಾವು ಸಮಾಜ ವಿಭಜನೆ ಮತ್ತು ಸಾಮಾಜಿಕ ಸಮಸ್ಯೆಗಳ ಏರಿಕೆಗೆ ಕಾರಣವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಇಂದಿನ ನಗರೀಕರಣ, ಭೂಸ್ವಾಧೀನೀಕರಣಗಳ ಹಾವಳಿಯಿಂದ ಅನೇಕ ಬಗೆಯ ಆಧುನಿಕ ಸಮಸ್ಯೆಗಳು ಉದ್ಭವಿಸುತ್ತಿವೆ. ಸಂಪನ್ಮೂಲಗಳ ದರೋಡೆಯ ಜೊತೆಗೆ ಪರಿಸರ ಮಾಲಿನ್ಯವು ಏರುತ್ತಿದೆ. ಇವೆಲ್ಲಕ್ಕೂ ಪರಿಹಾರ ಹುಡುಕುವ ಪ್ರಯತ್ನವನ್ನು ವಿದ್ಯಾರ್ಥಿ ದಿಶೆಯಿಂದಲೇ ಕೈಗೊಳ್ಳಬೇಕು ಎಂದರು.

## ಸೌತ್ ಝೋನ್ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್

# ಎಸ್.ಪ್ರಸಾದ್‌ಗೆ 3 ಪದಕಗಳ ಗರಿ

ಮೈಸೂರು: ಪಾಂಡಿಚೆರಿಯಲ್ಲಿ ಸೆಪ್ಟೆಂಬರ್ 16 ರಿಂದ 18ರವರೆಗೆ ನಡೆದ 37ನೇ ಸೌತ್ ಝೋನ್ (ನ್ಯಾಷನಲ್) ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್ಶಿಪ್?2026ರಲ್ಲಿ ಮೈಸೂರಿನ ಪ್ರತಿಭಾವಂತ ಅಥ್ಲೀಟ್ ಲೇಖನ ಎಸ್. ಪ್ರಸಾದ್ ಅವರು ಅತ್ಯುತ್ತಮ ಸಾಧನೆ ಮಾಡುವ ಮೂಲಕ ಮೈಸೂರು ನಗರ ಹಾಗೂ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಪ್ರತಿಷ್ಠಿತ ರಾಷ್ಟ್ರೀಯ ಮಟ್ಟದ ಈ ಕ್ರೀಡಾಕೂಟದಲ್ಲಿ ಅವರು ತೋರಿದ ಅಮೋಘ ಪ್ರದರ್ಶನ ಕ್ರೀಡಾ ವಲಯದಲ್ಲಿ ತೀವ್ರ ಮೆಚ್ಚುಗೆಗೆ ಪಾತ್ರವಾಗಿದೆ.

### ಟ್ರ್ಯಾಕ್‌ನಲ್ಲಿ ಮಿಂಚಿ ಚಿನ್ನ ಮತ್ತು ಬೆಳ್ಳಿ ಪದಕಗಳ ಬೇಟೆ

ಕ್ರೀಡಾಕೂಟದ ಟ್ರ್ಯಾಕ್ನಲ್ಲಿ ಅತ್ಯದ್ಭುತ ಪ್ರದರ್ಶನ ನೀಡಿದ ಲೇಖನ ಎಸ್. ಪ್ರಸಾದ್ ಅವರು 100 ಮೀಟರ್ ಹಾಗೂ 200 ಮೀಟರ್ ಓಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ತಲಾ ಒಂದು ಬೆಳ್ಳಿ ಪದಕದಂತೆ ಒಟ್ಟು ಎರಡು ಬೆಳ್ಳಿ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದಲ್ಲದೆ, 4100 ಮೀಟರ್ ಮಿಕ್ಸ್ಡ್ ರಿಲೇ ಓಟದ ಸ್ಪರ್ಧೆಯಲ್ಲಿಯೂ ಅತ್ಯುತ್ತಮ ಪ್ರದರ್ಶನ ನೀಡಿ ಚಿನ್ನದ ಪದಕ ಗೆಲ್ಲುವ ಮೂಲಕ ಕ್ರೀಡಾಕೂಟದಲ್ಲಿ ಒಟ್ಟು ಮೂರು ಪದಕಗಳಿಗೆ (ಒಂದು ಚಿನ್ನ ಹಾಗೂ ಎರಡು ಬೆಳ್ಳಿ) ಮುತ್ತಿಟ್ಟು ಗಮನಾರ್ಹ ಸಾಧನೆ ಮಾಡಿದ್ದಾರೆ.



### ತರಬೇತುದಾರರ ಶ್ರಮ ಹಾಗೂ ಯುವ ಕ್ರೀಡಾಪಟುಗಳಿಗೆ ಸ್ಫೂರ್ತಿ

ರಾಷ್ಟ್ರಮಟ್ಟದಲ್ಲಿ ಮಿಂಚಿದ ಲೇಖನ ಅವರ ಈ ಕ್ರೀಡಾ ಸಾಧನೆಗೆ ಅವರ ಕುಟುಂಬಸ್ಥರು, ತರಬೇತುದಾರರಾದ ಸುಹಾಸ್ ಗೌಡ, ಕರ್ನಾಟಕ ರಾಜ್ಯದ ಕ್ರೀಡಾಭಿಮಾನಿಗಳು ಹಾಗೂ ವಿವಿಧ ಕ್ರೀಡಾ ಸಂಘಟನೆಗಳ ವತಿಯಿಂದ ವ್ಯಾಪಕ ಅಭಿನಂದನೆಗಳು ಸಲ್ಲಿಕೆಯಾಗಿವೆ. ಲೇಖನ ಎಸ್. ಪ್ರಸಾದ್ ಅವರ ಕ್ರೀಡಾ ಪ್ರತಿಭೆ ಹಾಗೂ ನಿರಂತರ ಪರಿಶ್ರಮವು ನಾಡಿನ ಉದಯೋನ್ಮುಖ ಯುವ ಕ್ರೀಡಾಪಟುಗಳಿಗೆ ಅತ್ಯಂತ ಸ್ಫೂರ್ತಿದಾಯಕವಾಗಿದೆ.

# ಸೆ.27ರಂದು ಶಕಿ ದೇವತಾ ಪೂಜಾ ಮಹೋತ್ಸವ

ಮೈಸೂರು: ಕೆ.ಆರ್. ಮೊಹಲ್ಲಾ ಆಯಿಲ್ ಮಿಲ್ ರಸ್ತೆಯಲ್ಲಿನ ಮೇಲ್‌ಮರುವತ್ತೂರು ಆದಿ ಪರಾಶಕ್ತಿ ಪೂಜಾ ಮಂಡಳಿ ವತಿಯಿಂದ ಸೆ.27 ರಂದು ಕಳಸ ದೀಪ ಯಾಗ ಪೂಜೆ ಮತ್ತು ಗಂಜಿ ಮಡಿಕೆ ಮೆರವಣಿಗೆ ಮಹೋತ್ಸವ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಎಸ್. ವೆಂಕಟಾಚಲ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಳಗ್ಗೆ 9.30ಕ್ಕೆ ದೇವಾಂಬಾ ಅಗ್ರಹಾರದಲ್ಲಿರುವ ಸೀತಾ ಕಲ್ಯಾಣ ಮಂಟಪದಿಂದ ಗಂಜಿ ಮಡಿಕೆ ಮೆರವಣಿಗೆ ಹೊರಟು ಪಾಲಿಕೆ ವೃತ್ತ ಹಾಯ್ದು ಚಾಮರಾಜ ಜೋಡಿ ರಸ್ತೆ ಮೂಲಕ ಸುಬ್ಬರಾಯನಕೆರೆ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನ ತಲುಪಲಿದೆ. ಅಲ್ಲಿ ಬೆಳಗ್ಗೆ 11ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಸುಮಾರು 3 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು. ಜಗನ್ನಾಥ್, ಮೋಹನ್ ವೇಲ್, ಇಂದ್ರಮ್ಮ, ಕಮಲಾ, ಸೆಲ್ವರಾಜ್, ಪೂರ್ಣಿಮಾ ಹಾಗೂ ರೇಖಾ ಇದ್ದರು.



# ಸಿಎಂಗೆ ಕಪ್ಪು ಭಾವುಟ ಪ್ರದರ್ಶಿಸಲು ನಿರ್ಧಾರ



**ಚಾಮರಾಜನಗರ:** ಜಿಲ್ಲೆಯ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಗಮನ ಸೆಳೆಯಲು ಅ.30 ರಂದು ಜಿಲ್ಲೆಯ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರಕ್ಕೆ ಭೇಟಿ ನೀಡುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿ ನಿರ್ಧರಿಸಿದೆ ಎಂದು ಸಮಿತಿಯ ರಾಜ್ಯಾಧ್ಯಕ್ಷ ಕೆಲ್ಲಂಬಳ್ಳಿ ಸೋಮನಾಯಕ ಎಚ್ಚರಿಸಿದರು.

ನಗರದ ಪ್ರವಾಸಿಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ. ಅವರು ಮಾತನಾಡಿ. ಜಿಲ್ಲೆಯಲ್ಲಿ ಮಾನವ- ಪ್ರಾಣಿ ಸಂಘರ್ಷ ಪ್ರಕರಣಗಳು ಹೆಚ್ಚಾಗುತ್ತಿದ್ದು, ರೈತರ ಮೇಲೆ ಆನೆ, ಹುಲಿ ದಾಳಿ ಮಾಡುತ್ತಿದ್ದು, ಬಡಗಲಪುರದಲ್ಲಿ. ರೈತ ಬಸವಣ್ಣ, ಕುಳ್ಳೂರಿನಲ್ಲಿ ಒಬ್ಬ, ಗುಂಡ್ಲುಪೇಟೆ ತಾಲೂಕಿನಲ್ಲಿ ಓರ್ವ ಮೃತಪಟ್ಟಿದ್ದಾರೆ. ಜಿಲ್ಲೆಯು ಬರದಿಂದ ಕಂಗೆಟ್ಟಿದ್ದು.. ಕೆರೆಕಟ್ಟೆಗಳು ಬರಿದಾಗಿದ್ದು, ಅಂತರ್ಜಲ ಮೂಲಗಳೇ ಮುಚ್ಚಿ ಹೋಗಿದ್ದು ಜನ, ಜನುವಾರುಗಳಿಗೆ ಕುಡಿಯುವ ನೀರಿಗೆ ಪರಿತಪಿಸುವಂತಹ ವಾತಾವರಣ ಸೃಷ್ಟಿಯಾಗಿದೆ. ಆದರೂ ಕೂಡ ರಾಜ್ಯ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಅರಣ್ಯಸಚಿವರು ಸೌಜನ್ಯಕ್ಕಾದರೂ ಜಿಲ್ಲೆಗೆ ಭೇಟಿ ನೀಡಿ ಕಾಡುಪ್ರಾಣಿಗಳಿಂದ ಮೃತಪಟ್ಟ ಕುಟುಂಬಗಳಿಗೆ ಸಾಂತ್ವನ ಹೇಳಿಲ್ಲ ಅರಣ್ಯ ಅಧಿಕಾರಿಗಳು ಬೋನು ಇಡುತ್ತಾರೆ ಹೊರತು ಹುಲಿ ಸೆರೆಹಿಡಿಯುತ್ತಿಲ್ಲ. ಇದರಿಂದ ರೈತರು ತಮ್ಮ ಹೊಲ, ಗದ್ದೆ, ತೋಟಗಳಿಗೆ ಹೋಗಲು ಭಯಪಡುವಂತಾಗಿದೆ ಎಂದರು. ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಬಹಳಷ್ಟು ರಸ್ತೆಗಳು ಆಗಬೇಕು. ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಆಗುತ್ತಿಲ್ಲ. ಚಾಮರಾಜ ನಗರ ನಗರಸಭೆ ಸ್ಥಿತಿ ಗ್ರಾಮ ಪಂಚಾಯಿತಿಗಿಂತ ಕಡಿಮೆಯಾಗಿದೆ. ಜಿಲ್ಲೆ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಗಮನ ಸೆಳೆಯಲು ಅವರಿಗೆ ಕಪ್ಪು ಬಾವುಟ ಪ್ರದರ್ಶನ ತಿಳಿಸಿದರು.

### ಹೆಚ್ಚಿನ ಅನುದಾನ ಬಿಡುಗಡೆಗೊಳಿಸಲು ಆಗ್ರಹ

ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಆಲೂರುಮಲ್ಲು ಮಾತನಾಡಿ, ರಾಜ್ಯ ಸರ್ಕಾರವು ಜಿಲ್ಲೆಯ 5 ತಾಲೂಕುಗಳನ್ನು ಬರ ಎಂದು ಘೋಷಣೆ ಮಾಡಿದೆ ಹೊರತು ಯಾವುದೇ ಅನುಷ್ಠಾನ ಮಾಡುತ್ತಿಲ್ಲ. ಮೇವು ಕೇಂದ್ರ ತೆರೆದಿಲ್ಲ. ಕೆರೆಗಳಿಗೆ ನೀರು ತುಂಬಿಸುವ ಕೆಲಸ ಮಾಡಿಲ್ಲ. ಜಿಲ್ಲೆಯ ಜನತೆ ಬರದಿಂದ ತುಂಬಾ ಸಂಕಷ್ಟದಲ್ಲಿ ಸಿಲುಕಿದ್ದಾರೆ. ರಾಜ್ಯ ಸರ್ಕಾರ ಕೂಡಲೇ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ಜಿಲ್ಲೆಯ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳ ಗಮನ ಸೆಳೆಯಲು ಕಪ್ಪು ಬಾವುಟ ಪ್ರದರ್ಶನ ಮಾಡಲಾಗುವುದು ಎಂದರು. ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಹೋರಾಟ ಸಮಿತಿ ಜಿಲ್ಲಾ ಉಪಾಧ್ಯಕ್ಷ ಜಿ.ಎಂ.ಶಂಕರ್, ತಾಲೂಕು ಅಧ್ಯಕ್ಷ ಮಹದೇವಸ್ವಾಮಿ ಕಲರ್, ಟೌನ್ ಅಧ್ಯಕ್ಷ ಕಾಳನಹುಂಡಿ ಮಲ್ಲಿಕ್ ಹಾಜರಿದ್ದರು.

# ರೈತರಿಗೆ ಸರ್ಕಾರದಿಂದ ಅಪಮಾನ

ರಾಮನಗರ: ರೈತರಿಗೆ 2500 ರೂ. ತುಟ್ಟಿ ಪರಿಹಾರ ಘೋಷಿಸಿ ರಾಜ್ಯ ಸರ್ಕಾರ ರೈತರಿಗೆ ಘೋರ ಅವಮಾನ ಮಾಡಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ರೈತರ ಬಗ್ಗೆ ಸರ್ಕಾರದ ನಿರ್ಲಕ್ಷವನ್ನು ಖಂಡಿಸಿ ಇದೇ ಸೆ.28ರಂದು ಸೋಮವಾರ ರಾಮನಗರದ ಎ.ಪಿ.ಎಂ.ಸಿ ಮಾರುಕಟ್ಟೆ ಬಳಿಯಿಂದ ಉಪವಿಭಾಗಾಧಿಕಾರಿಗಳ ಕಚೇರಿವರೆಗೆ ಸರ್ಕಾರದ ಶವಯಾತ್ರ ಹಮ್ಮಿಕೊಳ್ಳುವುದಾಗಿ ತಿಳಿಸಿದ್ದಾರೆ.



▸▸ **ಬೆಳೆ ನಷ್ಟಕ್ಕೆ 2500 ರೂ ಪರಿಹಾರಕ್ಕೆ ರೈತ ಮುಖಂಡ ಕುಮಾರಸ್ವಾಮಿ ಆಕ್ರೋಶ**

ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಅವರು, ಬರದಿಂದ ಕಂಗೆಟ್ಟು ಆತ್ಮಹತ್ಯೆಗೆ ಮುಂದಾಗಿರುವ 50 ಲಕ್ಷ ಅನ್ನದಾತರಿಗೆ ರಾಜ್ಯ ಸರ್ಕಾರ ಕೇವಲ 2500 ರೂ. ಘೋಷಣೆ ಮಾಡಿರುವುದು ಅನ್ನದಾತನಿಗೆ ಮಾಡಿದ ಮಹಾ ಅವಮಾನ ಎಂದು ಜರಿದಿದ್ದಾರೆ. ಒಬ್ಬ ರೈತ ಒಂದು ಎಕರೆಗೆ ಬಿತ್ತನೆ ಬೀಜ, ಗೊಬ್ಬರ, ಟ್ರ್ಯಾಕ್ಟರ್ ಬಾಡಿಗೆಗೆ ಮಾಡಿರುವ ಸಾಲವೇ 40 ರಿಂದ 50 ಸಾವಿರ ರೂ ಆಗಿದೆ. ಬೆಳೆ ಸಂಪೂರ್ಣ ನಾಶವಾಗಿ ಬೀದಿಗೆ ಬಿದ್ದಿರುವ ರೈತನಿಗೆ ನೀವು 2500 ರೂ. ಅಂದರೆ ದಿನಕ್ಕೆ 8 ರೂಪಾಯಿ ಭಿಕ್ಷೆ ಹಾಕಿದಂತೆ. ನಾಚಿಕೆಯಾಗಬೇಕು ಎಂದು ಮುಖ್ಯಮಂತ್ರಿಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪ್ರತಿ ಎಕರೆಗೆ ಕನಿಷ್ಠ 25 ಸಾವಿರ ರೂ ಕೊಡಬೇಕು ಎಂದು ಒತ್ತಾಯಿಸಿದ್ದಾರೆ.

ಇಂತಹ ಬಿಡಿ ಕಾಸು, ಚಿಲ್ಲರೆ ದುಡ್ಡು ನಮಗೆ ಬೇಕಿಲ್ಲ. ಈ ಕೂಡಲೇ ರೈತರ ಎಲ್ಲಾ ಬಗೆಯ ಬೆಳೆ ಸಾಲ, ಮಧ್ಯಮಾವಧಿ ಸಾಲವನ್ನು ಶೇ 100 ರಷ್ಟು ಸಂಪೂರ್ಣ ಮನ್ನಾ ಮಾಡಬೇಕು. ಸಾಲ ಮರುಪಾವತಿ ಅವಧಿ ವಿಸ್ತರಣೆ, ಬ್ಯಾಂಕ್ ಜಪ್ತಿ, ಸಾಲ ವಸೂಲಾತಿಯನ್ನು ಕೂಡಲೇ ನಿಲ್ಲಿಸಿ ಎಂದು ಅವರು ಆಗ್ರಹಿಸಿದ್ದಾರೆ.

ಸರ್ಕಾರ ತಮ್ಮ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ, ಸೋಮವಾರದ ಪ್ರತಿಭಟನೆ ಉಗ್ರ ರೂಪ ಪಡೆಯಲಿದೆ. ರಾಜ್ಯದ್ಯಾಂತ ರೈತರು ಬೀದಿಗಿಳಿಯಲಿದ್ದಾರೆ ಎಂದು ಅವರು ಎಚ್ಚರಿಸಿದ್ದಾರೆ.

# ಪ್ರತಾಪ್ ಸಿಂಹರ ವಿರುದ್ಧ ಅವಾಚ್ಯ ಪದ ಬಳಕೆಗೆ ಒಕ್ಕಲಿಗರ ಸಂಘದ ಖಂಡನೆ

ಮೈಸೂರು: ಮಾಜಿ ಸಂಸದ ಪ್ರತಾಪಸಿಂಹರ ವಿರುದ್ಧ ಕೆಲವು ವ್ಯಕ್ತಿಗಳು ಸಾರ್ವಜನಿಕವಾಗಿ ಅವಾಚ್ಯ ಶಬ್ದಗಳನ್ನು ಬಳಸಿಕೊಂಡು ವೈಯಕ್ತಿಕ ನಿಂದನೆ ಹಾಗೂ ಅವಹೇಳನ ಮಾಡುತ್ತಿರುವುದು ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಗಮನಕ್ಕೆ ಬಂದಿದ್ದು, ಪ್ರತಾಪ್ ಸಿಂಹರ ವಿರುದ್ಧ ಟಿ.ನರಸೀಪುರದಲ್ಲಿ ದಾಖಲಾಗಿರುವ ಜಾತಿ ನಿಂದನೆ ಪ್ರಕರಣದ ಕುರಿತು ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘ ತೀವ್ರ ಕಳವಳ ವ್ಯಕ್ತಪಡಿಸುತ್ತವೆ.



ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ (ಚಾಮರಾಜನಗರ ಜಿಲ್ಲೆ ಒಳಗೊಂಡಂತೆ) ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್ ಪ್ರತಿಕ್ರಯಿಸಿ, ಸಮಾಜದಲ್ಲಿ ಜಾತಿ ಆಧಾರಿತ ಅವಮಾನ, ತಾರತಮ್ಯ ಮತ್ತು ದೌರ್ಜನ್ಯಗಳನ್ನು ತಡೆಯುವ ಉದ್ದೇಶದಿಂದ ಜಾರಿಯಲ್ಲಿರುವ ಕಾನೂನುಗಳು ಅತ್ಯಂತ ಮಹತ್ವದ್ದಾಗಿವೆ. ಇಂತಹ ಕಾನೂನುಗಳ ಉದ್ದೇಶವನ್ನು ರಾಜಕೀಯ ಕಾರಣಕ್ಕೆ ಇಂಥ ಕಾಯ್ದೆಯನ್ನು ದುರ್ಬಳಕೆ ಮಾಡಿಕೊಂಡು ಆ ಕಾಯ್ದೆಯ ಮಹತ್ವವನ್ನು ಈ ರೀತಿ ಹಾಳು ಮಾಡುತ್ತಿರುವುದು ಯಾರಿಗೂ ಶೋಭೆ ತರುವುದಿಲ್ಲ,ನಿಜವಾದ ಜಾತಿ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗಳಿಗೆ ಕಾನೂನು ರಕ್ಷಣೆ ದೊರೆಯುವುದನ್ನು ಯಾವುದೇ ಕಾರಣಕ್ಕೂ ದುರ್ಬಲಗೊಳಿಸಬಾರದು. ಕಾನೂನಿನ ರಕ್ಷಣೆ ನಿಜವಾದ ಸಂತ್ರಸ್ತರಿಗೆ ದೊರೆಯಬೇಕು; ಅದೇ ಕಾನೂನು ದುರ್ಬಳಕೆಯಾಗದಂತೆ ನ್ಯಾಯಸಮ್ಮತ ಪರಿಶೀಲನೆಯೂ ನಡೆಯಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ವ್ಯಕ್ತಿಯ ರಾಜಕೀಯ ಅಥವಾ ಸಾಮಾಜಿಕ ಅಭಿಪ್ರಾಯಗಳೊಂದಿಗೆ ಭಿನ್ನಾಭಿಪ್ರಾಯ ಹೊಂದುವುದು ಪ್ರತಿಯೊಬ್ಬರ ಹಕ್ಕಾಗಿದೆ. ಆದರೆ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ ವೈಯಕ್ತಿಕ ನಿಂದನೆ, ಅವಾಚ್ಯ ಪದಗಳ ಬಳಕೆ, ಬೆದರಿಕೆ ಅಥವಾ ಅಸಂಸದೀಯ ರೀತಿಯ ವರ್ತನೆಗೆ ಅವಕಾಶ ಇರಬಾರದು. ಯಾರೇ ಆಗಿರಲಿ, ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಯ ವಿರುದ್ಧ ಆರೋಪ ಅಥವಾ ಟೀಕೆಗಳಿದ್ದಲ್ಲಿ ಅವುಗಳನ್ನು ಕಾನೂನುಬದ್ಧ ಹಾಗೂ ಸಂವಿಧಾನಬದ್ಧ ಮಾರ್ಗದಲ್ಲಿ ವ್ಯಕ್ತಪಡಿಸಬೇಕು. ಸಾಮಾಜಿಕ ಜಾಲತಾಣಗಳು ಸೇರಿದಂತೆ ಯಾವುದೇ ಸಾರ್ವಜನಿಕ ವೇದಿಕೆಯಲ್ಲಿ ವ್ಯಕ್ತಿಯ ಗೌರವಕ್ಕೆ ಧಕ್ಕೆ ತರುವಂತಹ ಭಾಷೆ ಅಥವಾ ಕೃತ್ಯಗಳನ್ನು ಬಳಸುವುದು ಸಮಾಜದಲ್ಲಿ ಅನಗತ್ಯ ಉದ್ವಿಗ್ನತೆಗೆ ಕಾರಣವಾಗಬಹುದು.

ಕಾನೂನು ಮತ್ತು ಸಂವಿಧಾನದ ಆಶಯಗಳನ್ನು ಗೌರವಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಯಾವುದೇ ವ್ಯಕ್ತಿಯ ವಿರುದ್ಧದ ಆರೋಪಗಳು ಅಥವಾ ವಿವಾದಗಳಿಗೆ ಸಂಬಂಧಿಸಿದಂತೆ ಕಾನೂನು ತನ್ನದೇ ಆದ ರೀತಿಯಲ್ಲಿ ಕ್ರಮ ಕೈಗೊಳ್ಳಲು ಅವಕಾಶವಿದೆ. ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘವು ಇದರ ವಿರುದ್ಧ ಹೋರಾಟಕ್ಕೆ ಕರೆ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಹಿರಿಯ ನಾಗರಿಕರು ಕ್ರೀಡೆಗಳಲ್ಲಿ ಪಾಲ್ಗೊಳ್ಳಿ

## ಜಿಲ್ಲಾಧಿಕಾರಿ ಶ್ರೀರೂಪ ಕರೆ । ವಿಶ್ವ ಹಿರಿಯ ನಾಗರಿಕರ ದಿನಾಚರಣೆ



ಚಾಮರಾಜನಗರ: ಹಿರಿಯ ನಾಗರಿಕರು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಂಡು ದೈನಂದಿನ ಜೀವನವನ್ನು ಉಲ್ಲಾಸ ಹಾಗೂ ಉತ್ಸಾಹದಿಂದ ಸಾಗಿಸುವ ಮೂಲಕ ತಮ್ಮ ಜೀವನೋತ್ಸಾಹವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ಸಲಹೆ ನೀಡಿದರು.

ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಹಿರಿಯ ನಾಗರಿಕರ ಜಿಲ್ಲಾ ಮಟ್ಟದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

### ಸ್ಪರ್ಧೆಗಳ ವಿವರ ಹಾಗೂ ಉಪಸ್ಥಿತರಿದ್ದ ಗಣ್ಯರು

ವೇದಿಕೆ ಕಾರ್ಯಕ್ರಮದ ಬಳಿಕ 60 ವರ್ಷ ಮೇಲ್ಪಟ್ಟ ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಬಿರುಸಿನ ನಡಿಗೆ, ಮ್ಯೂಸಿಕಲ್ ಚೇರ್ ಹಾಗೂ ಬಕೆಟ್ನಲ್ಲಿ ಬಾಲ್ ಎಸೆಯುವ ಕ್ರೀಡಾ ಸ್ಪರ್ಧೆಗಳು ಹಾಗೂ ಗಾಯನ ಮತ್ತು ಏಕಪಾತ್ರಾಭಿನಯದ ಸಾಂಸ್ಕೃತಿಕ ಸ್ಪರ್ಧೆಗಳು ನಡೆದವು. ಈ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ 150ಕ್ಕೂ ಅಧಿಕ ಮಂದಿ ಹಿರಿಯ ನಾಗರಿಕರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಕಲ್ಯಾಣಾಧಿಕಾರಿ ಡಾ. ಕೆ.ಎನ್. ಮಂಜುನಾಥ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರಾದ ಸುಭದ್ರದೇವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

### ಹಿರಿಯರು ಸಮಾಜದ ಆಧಾರಸ್ತಂಭ: ನ್ಯಾಯಾಧೀಶರಾದ ಈಶ್ವರ್

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ್ ಅವರು ಮಾತನಾಡಿ, ವಿಶ್ವ ಹಿರಿಯ ನಾಗರಿಕರ ದಿನವನ್ನು ಪ್ರತಿವರ್ಷ ಅಕ್ಟೋಬರ್ 1ರಂದು ಆಚರಿಸಲಾಗುತ್ತದೆ. ದಿನಾಚರಣೆ ಅಂಗವಾಗಿ ಹಿರಿಯ ನಾಗರಿಕರಿಗೆ ಸರ್ಕಾರವು ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಹಿರಿಯ ನಾಗರಿಕರು ಸಮಾಜ ಹಾಗೂ ಕುಟುಂಬದ ಪ್ರಮುಖ ಆಧಾರಸ್ತಂಭಗಳಾಗಿದ್ದು, ದೈಹಿಕ, ಮಾನಸಿಕ ಆರೋಗ್ಯ ಉತ್ತಮಪಡಿಸಿಕೊಳ್ಳಲು ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ಅವರಿಗೆ ಅತ್ಯವಶ್ಯವಾಗಿವೆ ಎಂದರು. ಜೀವನದಲ್ಲಿ ಸಾಕಷ್ಟು ಕಷ್ಟ-ಕಾರ್ಪಣ್ಯಗಳನ್ನು ದಾಟಿ ಬಂದಿರುವ ಹಿರಿಯರನ್ನು ಇತ್ತೀಚೆಗೆ ಕಡೆಗಣಿಸಿ ತುಚ್ಛವಾಗಿ ಕಾಣುತ್ತಿರುವುದು ಕಂಡುಬಂದಿದ್ದು, ಇದು ಸಲ್ಲದು. ಹಿರಿಯ ನಾಗರಿಕರನ್ನು ಗೌರವಾದರಗಳಿಂದ ನೋಡಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಹಿರಿಯರ ಮಹತ್ವದ ಅನುಭವಗಳು ಯುವಜನಾಂಗಕ್ಕೆ ತುಂಬಾ ಅತ್ಯಗತ್ಯವಾಗಿದ್ದು, ಅವರ ಮಾರ್ಗದರ್ಶನಗಳು ನಮಗೆ ನಿರ್ದೇಶನಗಳಾಗಬೇಕು. ಪಿಂಚಣಿ, ಬಸ್ಸಗಳಲ್ಲಿ ರಿಯಾಯಿತಿ ದರದಲ್ಲಿ ಪ್ರಯಾಣ, ನ್ಯಾಯಾಲಯಗಳಲ್ಲಿ ಹಿರಿಯ ನಾಗರಿಕರ ಪ್ರಕರಣಗಳ ತ್ವರಿತ ಇತ್ಯರ್ಥ ಸೇರಿದಂತೆ ಹಲವು ಸೌಲಭ್ಯಗಳನ್ನು ಸರ್ಕಾರ ಒದಗಿಸಿದೆ ಎಂದು ಅವರು ತಿಳಿಸಿದರು.

### ಸೋಲು-ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ ಹಾಗೂ ಹಿರಿಯರ ಗೌರವ

ಹಿರಿಯ ನಾಗರಿಕರು ವಯಸ್ಸಾಗಿದೆ ಎಂದು ಜೀವನದಲ್ಲಿ ಉತ್ಸಾಹ ಕಳೆದುಕೊಳ್ಳದೆ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಭಾಗವಹಿಸಬೇಕು. ಸೋಲು-ಗೆಲುವನ್ನು ಬದಿಗೆ ಸರಿಸಿ ಕ್ರೀಡಾಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವುದರಿಂದ ಜೀವನದುದ್ದಕ್ಕೂ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಪ್ರತಿನಿತ್ಯದ ಜೀವನದಲ್ಲಿ ಹೆಚ್ಚು ಲವಲವಿಕೆ ಹೊಂದಿ ಆತ್ಮವಿಶ್ವಾಸ ವೃದ್ಧಿಸಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಹಿರಿಯರ ಮೌಲ್ಯಯುತ ಜೀವನಾದರ್ಶಗಳು ಇಂದಿನ ಯುವಜನತೆಗೆ ಮಾರ್ಗದರ್ಶಿಯಾಗಿವೆ. ಸಮಾಜದಲ್ಲಿ ಹಿರಿಯರನ್ನು ಕಡೆಗಣಿಸದೇ ಮಕ್ಕಳು ಹಾಗೂ ಪೋಷಕರು ಅತ್ಯಂತ ಗೌರವದಿಂದ ನಡೆಸಿಕೊಳ್ಳಬೇಕು. ಹಿರಿಯ ನಾಗರಿಕರ ಅನುಭವಗಳು ನಮ್ಮೆಲ್ಲರಿಗೂ ದಾರಿದೀಪವಾಗಿವೆ. ಉತ್ತಮ ಸಮಾಜ ನಿರ್ಮಾಣಕ್ಕಾಗಿ ಮಕ್ಕಳು, ಯುವಜನರು ಸೇರಿದಂತೆ ಪ್ರತಿಯೊಬ್ಬರೂ ಹಿರಿಯರನ್ನು ಗೌರವಿಸುವಂತೆ ಅವರು ಕರೆ ನೀಡಿದರು.


**ಕರ್ನಾಟಕ ಸರ್ಕಾರ**
**ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ,**
**ಮೈಸೂರು ಅರಮನೆ ಮಂಡಳಿ, ಮೈಸೂರು**
**Phone: 0821-2421051, Fax: 2434425,**
**e-mail: ddmysorepalace@gmail.com,**
**GST:29AAAGM0484M1ZX**
**ಟೆ.ಸಂ.: ಕಾನಿಅ/ಮೈಅಮಂ/ಉನಿ/ಸಿವಿಲ್/ಟೆಂಡರ್-08/2026-27, ದಿ: 23.09.2026**

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ-ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಸಿವಿಲ್ ವಿಭಾಗದಿಂದ 01 ಕೆಲಸವನ್ನು ಕೈಗೊಳ್ಳುವ ಸಂಬಂಧ ರೂ.4.24 ಲಕ್ಷಗಳು ಜಿ.ಎಸ್.ಟಿ ಗಳ ಕೆಲಸಕ್ಕೆ ಸದರಿ ಕೆಲಸದಲ್ಲಿ ಅನುಭವವಿರುವ ಅರ್ಹ ಗುತ್ತಿಗೆದಾರರು/ ಏಜೆನ್ಸಿ/ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಅರ್ಜಿದಾರರು **1)** ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿ: 29.09.2026 ಸಂಜೆ 4.00 ಗಂಟೆಯವರೆಗೆ. **2)** ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ ದಿ: 29.09.2026 ಸಂಜೆ 5.00 ಗಂಟೆವರೆಗೆ. **3)** ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿ: 30.09.2026 ಸಂಜೆ 4.00 ಗಂಟೆವರೆಗೆ **4)** ಭರ್ತಿ ಮಾಡಿದ ಟೆಂಡರನ್ನು ತೆರೆಯುವ ದಿ: 30.09.2026 ಸಂಜೆ 5.00 ಗಂಟೆಗೆ. ಸದರಿ ಕೆಲಸದಲ್ಲಿ ಅನುಭವವಿರುವ ಗುತ್ತಿಗೆದಾರರಿಗೆ ಮಾತ್ರ ಸಂಬಂಧಿಸಿದ ಕೆಲಸಗಳ ಟೆಂಡರ್ ಫಾರಂ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಉಪ ನಿರ್ದೇಶಕರ ಕಛೇರಿ, ಮೈಸೂರು ಅರಮನೆ ಮಂಡಳಿ, ಮೈಸೂರು ರಲ್ಲಿ ಕಛೇರಿಯ ಸಮಯದಲ್ಲಿ ಮಾಹಿತಿ ಪಡೆಯಬಹುದು.

**ಸಹಿ/- ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು**

DIPR/DDMYS/784/KSMCA/481/2026-27


# ಕಾಡುಹಂದಿ ಬೇಟೆಯಾಡಿದ ಹುಲಿ





ಗುಂಡ್ಲುಪೇಟೆ: ತಾಲೂಕಿನ ಶ್ಯಾನಾಡ್ರಹಳ್ಳಿ ಗ್ರಾಮದ ಸಮೀಪದ ಬಲಚವಾಡಿ ಸರ್ವೇ ನಂ.23/1ರ ಜಮೀನಿನಲ್ಲಿ ಹುಲಿಯೊಂದು ಕಾಡುಹಂದಿಯನ್ನು ಬೇಟೆಯಾಡಿ, ಅರ್ಧ ತಿಂದು ತೆರಳಿರುವ ಘಟನೆ ಬೆಳಕಿಗೆ ಬಂದಿದೆ.

ಶ್ಯಾನಾಡ್ರಹಳ್ಳಿ ಗ್ರಾಮದ ರಾಜೇಂದ್ರ ಎಸ್.ಎಂ. ಅವರ ಜಮೀನಿನಲ್ಲಿ ಕಾಡುಹಂದಿಯ ಅವಶೇಷಗಳು ಪತ್ತೆಯಾಗಿದ್ದು, ಹುಲಿಯೇ ಬೇಟೆಯಾಡಿರುವ ಸಾಧ್ಯತೆ ಇದೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಈ ಭಾಗದಲ್ಲಿ ಹುಲಿ ಸಂಚಾರದ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳ ಗಮನಕ್ಕೆ ಹಲವು ಬಾರಿ ತಂದಿದ್ದರೂ, ಸಮರ್ಪಕ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಈ ಹಿಂದೆ ಕೂಡ ಇದೇ ಭಾಗದಲ್ಲಿ ಹುಲಿ ಕಾಣಿಸಿಕೊಂಡಿದ್ದು, ಜಾನುವಾರುಗಳ ಮೇಲೆ ದಾಳಿ ನಡೆಸಿ ಹಸುಗಳನ್ನು ಕೊಂದಿರುವ ಘಟನೆಗಳು ನಡೆದಿವೆ. ಇದೀಗ ಮತ್ತೆ ಹುಲಿ ಸಂಚಾರದ ಕುರುಹು ಕಂಡುಬಂದಿರುವುದು ರೈತರು ಹಾಗೂ ಗ್ರಾಮಸ್ಥರಲ್ಲಿ ಆತಂಕಕ್ಕೆ ಕಾರಣವಾಗಿದೆ.

ತಕ್ಷಣ ಹುಲಿ ಸಂಚಾರದ ಪ್ರದೇಶದಲ್ಲಿ ನಿಗಾ ಹೆಚ್ಚಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಬೇಕು. ಹುಲಿಯನ್ನು ಸೆರೆಹಿಡಿಯಲು ಅಗತ್ಯವಿದ್ದಲ್ಲಿ ಬೋನು ಅಳವಡಿಸಿ, ಗ್ರಾಮಸ್ಥರ ಆತಂಕ ನಿವಾರಿಸಬೇಕು ಎಂದು ಸುತ್ತಮುತ್ತಲಿನ . ಗ್ರಾಮಸ್ಥರು ಸ್ಥಳೀಯರು ಅರಣ್ಯ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ

# ಹೇಮಂತ ಕುಮಾರ್ ಕೃತಿಗಳ ಲೋಕಾರ್ಪಣೆ



ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್ ಬಗೆಗಿನ ಎರಡು ಕೃತಿಗಳನ್ನು ಕರ್ನಾಟಕದ ರಾಜ್ಯಪಾಲರು ಲೋಕಾರ್ಪಣೆ ಮಾಡಿದರು. ಜ್ಞಾನ ದೇಗುಲದಲ್ಲಿ ಮತ್ತು ಹೇಮಂತ ಎಂಬ ಈ ಎರಡು ಕೃತಿಗಳು ಪ್ರೊ. ಹೇಮಂತ ಕುಮಾರ್ ಅವರ ಶೈಕ್ಷಣಿಕ ಚಿಂತನೆ, ಅನುಭವ ಮತ್ತು ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಪರಿಚಯಿಸುತ್ತವೆ.

'ಜ್ಞಾನ ದೇಗುಲದಲ್ಲಿ' ಕೃತಿಯು ಪ್ರೊ. ಹೇಮಂತ ಕುಮಾರ್ ಅವರು ವಿವಿಧ ಸಂದರ್ಭಗಳಲ್ಲಿ ನೀಡಿದ ಭಾಷಣಗಳ ಸಂಕಲನವಾಗಿದೆ. ಉನ್ನತ ಶಿಕ್ಷಣ, ವಿಶ್ವವಿದ್ಯಾನಿಲಯಗಳ ಜವಾಬ್ದಾರಿ, ವಿದ್ಯಾರ್ಥಿಗಳು ಮತ್ತು ಯುವಜನತೆ, ಶಿಕ್ಷಣದ ಉದ್ದೇಶ, ಸಂಶೋಧನೆ, ಜ್ಞಾನ ಹಾಗೂ ಸಾಮಾಜಿಕ ಹೊಣೆಗಾರಿಕೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಅವರು ವ್ಯಕ್ತಪಡಿಸಿರುವ ವಿಚಾರಗಳು ಈ ಕೃತಿಯಲ್ಲಿ ಸಂಕಲಿಸಲ್ಪಟ್ಟಿವೆ. ವಿಶ್ವವಿದ್ಯಾನಿಲಯವು ಕೇವಲ ಪದವಿ ನೀಡುವ ಸಂಸ್ಥೆಯಾಗಿರದೆ, ಜ್ಞಾನ ಸೃಷ್ಟಿ, ಸಂಶೋಧನೆ ಮತ್ತು ಸಮಾಜಮುಖಿ ಚಿಂತನೆಗೆ ವೇದಿಕೆಯಾಗಬೇಕು ಎಂಬ ಆಶಯ ಅವರ ಹಲವು ಭಾಷಣಗಳಲ್ಲಿ ಪ್ರತಿಫಲಿಸುತ್ತದೆ, ಶಿಕ್ಷಣದ ಮೂಲಕ ವ್ಯಕ್ತಿತ್ಯ ನಿರ್ಮಾಣ ಮತ್ತು ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡುವ ಅಗತ್ಯವನ್ನು ಅವರು ಪ್ರತಿಪಾದಿಸಿರುವ ವಿಚಾರಗಳು ಕೃತಿಯಲ್ಲಿ ದಾಖಲಾಗಿವೆ. ಕಾರ್ಯಕ್ರಮದಲ್ಲಿ ಶ್ರೀ ಯೋಗನರಸಿಂಹ ಸ್ವಾಮಿ ದೇವಾಲಯದ ಶ್ರೀ ಭಾಷ್ಯಂ ಸ್ವಾಮೀಜಿ, ದೇವಾಲಯದ ಆಡಳಿತಾಧಿಕಾರಿ ಶ್ರೀನಿವಾಸ್ ಇನ್ನಿತರರು ಇದ್ದರು.

## ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಸೂಚನೆ

# ಬರ ಹಿನ್ನೆಲೆ: ರೈತರಿಂದ ಸಾಲ ವಸೂಲಾತಿ ಕಠಿಣ ಕ್ರಮ ಬೇಡ



ಚಾಮರಾಜನಗರ: ಚಾಮರಾಜನಗರ ಜಿಲ್ಲೆಯು ಬರ ಪೀಡಿತವೆಂದು ಸರ್ಕಾರ ಘೋಷಿಸಿರುವ ಹಿನ್ನೆಲೆಯಲ್ಲಿ ರೈತರ ವಿರುದ್ಧ ಕಠಿಣ ಸಾಲ ವಸೂಲಾತಿ ಕ್ರಮಗಳನ್ನು ಕೈಗೊಳ್ಳದಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇ ಗೌಡ ಅವರು ಬ್ಯಾಂಕ್ ಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ (ಸೆ.23) ಬರ ಪೀಡಿತ ಪ್ರದೇಶದ ರೈತರಿಗೆ ಬ್ಯಾಂಕ್‌ಗಳ ಮೂಲಕ ಪರಿಹಾರ ಕ್ರಮಗಳ ಪರಿಣಾಮಕಾರಿ ಅನುಷ್ಠಾನ ಸಂಬಂಧ ನಡೆದ ಬ್ಯಾಂಕ್ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಚಾಮರಾಜನಗರ ಜಿಲ್ಲೆಯ ಎಲ್ಲಾ ತಾಲೂಕು ಗಳನ್ನು ತೀವ್ರ ಬರಪೀಡಿತ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಅರ್ಹ ಬೆಳೆ ಸಾಲಗಳು ಹಾಗೂ ಕೃಷಿ ಆಧಾರಿತ ಸಾಲಗಳ ಮರುಪಾವತಿಯನ್ನು 12 ತಿಂಗಳ ಕಾಲ ತಾತ್ಕಾಲಿಕವಾಗಿ ಮುಂದೂಡಲಾಗಿದೆ (ಮೊರ ಟೋರಿಯಂ- ಇದು ಸ್ಟ್ಯಾಂಡರ್ಡ್ ಸಾಲಗಳಿಗೆ ಅನ್ವಯ) ಒಟ್ಟು ಮರುಪಾವತಿ ಅವಧಿಯನ್ನು 60 ತಿಂಗಳವರೆಗೆ ವಿಸ್ತರಿಸಲಾಗಿದ್ದು, ಈ ಕ್ರಮಗಳನ್ನು ಅನುಷ್ಠಾನಗೊಳಿಸಬೇಕು. ಬರಪೀಡಿತ ಪ್ರದೇಶದ ರೈತರಿಂದ ಬಲವಂತವಾಗಿ ಸಾಲ ವಸೂಲಾತಿ ಮಾಡುವಂತಿಲ್ಲ ಎಂದು ಬ್ಯಾಂಕ್‌ಗಳಿಗೆ ಸೂಚಿಸಿದರು.

ದಿ, 27-08-2026ರ ವೇಳೆಗೆ ಸ್ಟ್ಯಾಂಡರ್ಡ್ (ನಿಯಮಿತ) ಎಂದು ವರ್ಗೀಕರಿಸಲಾದ ಅರ್ಹ ಸಾಲ ಖಾತೆಗಳಿಗೆ ಮಾತ್ರ ಅನುತ್ಪಾದಕ ಸಾಲ (ಎನ್.ಪಿ.ಎ) ಖಾತೆಗಳನ್ನು ಹೊರತುಪಡಿಸಿ ರೈತರಿಂದ ಅರ್ಜಿ ನಿರೀಕ್ಷಿಸದೇ ಬ್ಯಾಂಕುಗಳು ಸ್ವಯಂ ಪ್ರೇರಿತವಾಗಿ ಸಾಲ ಮರು ರಚನೆ ಪ್ರಕ್ರಿಯೆಯನ್ನು ಕೈಗೊಳ್ಳಬೇಕು ಎಂದು ತಿಳಿಸಿದರು. ಸಾಲ ಮರು ರಚನೆಯ ನಂತರವು ಕೃಷಿ ಹಾಗೂ ಜೀವನಧಾರ ಚಟುವಟಿಕೆಗಳಿಗೆ ಅಗತ್ಯವಿರುವ ಹೊಸ ಸಾಲ ಒದಗಿಸಬೇಕು. ಬೆಳೆ ವಿಮೆ ಪರಿಹಾರಕ್ಕಾಗಿ ಕಾಯದೇ ಸಾಲ ಮರು ರಚನೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕು. ಬರ ಪೀಡಿತ ರೈತರಿಗೆ ಸಕಾಲದಲ್ಲಿ ಪರಿಹಾರ ಒದಗಿಸಲು ಬ್ಯಾಂಕುಗಳು ಹಾಗೂ ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಬ್ಯಾಂಕ ಗಳ ಮೂಲಕ ಕೈಗೊಂಡಿರುವ ಕ್ರಮಗಳ ಕುರಿತು ರೈತರಿಗೆ ವ್ಯಾಪಕ ಮಾಹಿತಿ ಒದಗಿಸಬೇಕು ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ಬ್ಯಾಂಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಲೀಡ್ ಬ್ಯಾಂಕ್ ವ್ಯವಸ್ಥಾಪಕರಾದ ಎಂ.ಎನ್. ಸುರೇಖ, ನಬಾರ್ಡ್‌ನ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕರಾದ ಹಿತ ಸುವರ್ಣ, ವಿವಿಧ ರಾಷ್ಟ್ರೀಕೃತ, ಖಾಸಗಿ ಹಾಗೂ ಗ್ರಾಮೀಣ ಬ್ಯಾಂಕುಗಳ ವ್ಯವಸ್ಥಾಪಕರು, ಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

# ಕಾಡಾನೆ ದಾಳಿಗೆ ವ್ಯಕ್ತಿ ಬಲಿ: ಸಚಿವ ಪುಟ್ಟರಂಗಶೆಟ್ಟಿ ಭೇಟಿ, ಸಾಂತ್ವನ

ಚಾಮರಾಜನಗರ: ತಾಲೂಕಿನ ಕುಳ್ಳೂರು ಗ್ರಾಮದಲ್ಲಿ ಕಾಡಾನೆ ದಾಳಿಗೆ ಮಹದೇವ ಎಂಬ ವ್ಯಕ್ತಿ ಮೃತಪಟ್ಟ ಹಿನ್ನೆಲೆಯಲ್ಲಿ ಪಶುಸಂಗೋಪನೆ, ರೇಷ್ಮೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅವರು ಇಂದು ಮೃತರ ಕುಟುಂಬವನ್ನು ಭೇಟಿ ಮಾಡಿ ಸಾಂತ್ವನ ಹೇಳಿದರು.



ಮೃತ ಮಹದೇವ ಅವರ ಕುಟುಂಬಕ್ಕೆ ಸಚಿವರು ವೈಯಕ್ತಿಕವಾಗಿ ಪರಿಹಾರ ಧನ ವಿತರಿಸಿದರು. ಮಹದೇವ ಅವರಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದು, ಕುಟುಂಬದ ನೆರವಿಗಾಗಿ ಒಬ್ಬರಿಗೆ ಅರಣ್ಯ ಇಲಾಖೆಯಲ್ಲಿ ಉದ್ಯೋಗ ಕಲ್ಪಿಸುವುದಾಗಿ ಭರವಸೆ ನೀಡಿದರು. ಕಾಡುಪ್ರಾಣಿಗಳ ದಾಳಿ ತಡೆಗಟ್ಟಲು ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಜನರ ಸುರಕ್ಷತೆಗೆ ಆದ್ಯತೆ ನೀಡಿ, ಕಾಡಂಚಿನ ಗ್ರಾಮಗಳಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಹೆಚ್ಚಿನ ನಿಗಾ ವಹಿಸುವಂತೆ ಸಚಿವರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ಬಿ.ಆರ್.ಟಿ ನಿರ್ದೇಶಕರು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ಮುಖಂಡರಾದ ಜಡೇಯಪ್ಪ, ಉಲ್ಲಾಸ್ ಹಾಗೂ ಗ್ರಾಮದ ಯಜಮಾನರು, ಮುಖಂಡರು ಹಾಜರಿದ್ದರು

# ರಾಜ್ಯಪಾಲರಿಂದ ಎರಡು ಕೃತಿಗಳ ಲೋಕಾರ್ಪಣೆ

## ಜ್ಞಾನ ದೇಗುಲದಲ್ಲಿ ಹೇಮಂತ ಕೃತಿಗಳು ಓದುಗರ ಕೈಗೆ



**ಬೆಂಗಳೂರು:** ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಜಿ. ಹೇಮಂತ ಕುಮಾರ್ ಅವರ ಬಗೆಗಿನ ಎರಡು ಕೃತಿಗಳನ್ನು ಕರ್ನಾಟಕದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಶುಕ್ರವಾರ ರಾಜಭವನದಲ್ಲಿ ಲೋಕಾರ್ಪಣೆ ಮಾಡಿದರು.

ಕೃತಿ ಬಿಡುಗಡೆ ಸಂದರ್ಭದಲ್ಲಿ ಡಾ. ಸತೀಶ್ ಚೆಟ್ಟಿ, ಪ್ರಾಧ್ಯಾಪಕರು, ಮ್ಯಾನೇಜ್‌ಮೆಂಟ್ ವಿಭಾಗ; ಡಾ. ಸಿ. ನಾಗಣ್ಣ, ವಿಶ್ರಾಂತ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ನಾಡೋಜ ಡಾ. ಭಾಷ್ಯಂ ಸ್ವಾಮೀಜಿ, ಸಂಸ್ಥಾಪಕರು, ಯೋಗನರಸಿಂಹಸ್ವಾಮಿ ದೇವಸ್ಥಾನ, ಮೈಸೂರು ಹಾಗೂ ಡಾ. ಶ್ರೀನಿವಾಸನ್, ಸಹ–ಸಂಸ್ಥಾಪಕರು, ಯೋಗನರಸಿಂಹಸ್ವಾಮಿ ದೇವಸ್ಥಾನ, ಮೈಸೂರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ರಾಜ್ಯಪಾಲರು, ?ಜ್ಞಾನ ದೇಗುಲದಲ್ಲಿ? ಮತ್ತು ?ಹೇಮಂತ? ಎಂಬ ಈ ಎರಡು ಕೃತಿಗಳು ಪ್ರೊ. ಹೇಮಂತ ಕುಮಾರ್ ಅವರ ಶೈಕ್ಷಣಿಕ ಚಿಂತನೆ, ಅನುಭವ ಮತ್ತು ವ್ಯಕ್ತಿತ್ವದ ವಿವಿಧ ಆಯಾಮಗಳನ್ನು ಪರಿಚಯಿಸುತ್ತವೆ. ಮತ್ತು ಅವರ ಬಗೆಗಿನ ಎರಡು ಕೃತಿಗಳು ಬಹಳ ಅರ್ಥಪೂರ್ಣವಾಗಿ ಮೂಡಿಬಂದಿದ್ದು, ?ಜ್ಞಾನ ದೇಗುಲದಲ್ಲಿ? ಕೃತಿಯು ಪ್ರೊ, ಹೇಮಂತ ಕುಮಾರ್ ಅವರು ವಿವಿಧ ಸಂದರ್ಭಗಳಲ್ಲಿ ನೀಡಿದ ಭಾಷಣಗಳ ಸಂಕಲನವಾಗಿದೆ ಎಂದು ಬಣ್ಣಿಸಿದರು.

ಉನ್ನತ ಶಿಕ್ಷಣ, ವಿಶ್ವವಿದ್ಯಾನಿಲಯಗಳ ಜವಾಬ್ದಾರಿ, ವಿದ್ಯಾರ್ಥಿಗಳು ಮತ್ತು ಯುವಜನತೆ, ಶಿಕ್ಷಣದ ಉದ್ದೇಶ, ಸಂಶೋಧನೆ, ಜ್ಞಾನ ಹಾಗೂ ಸಾಮಾಜಿಕ ಹೊಣೆಗಾರಿಕೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಅವರು ವ್ಯಕ್ತಪಡಿಸಿರುವ ವಿಚಾರಗಳು ಈ ಕೃತಿಯಲ್ಲಿ ಸಂಕಲಿಸಲ್ಪಟ್ಟಿವೆ. ವಿಶ್ವವಿದ್ಯಾನಿಲಯವು ಕೇವಲ ಪದವಿ ನೀಡುವ ಸಂಸ್ಥೆಯಾಗಿರದೆ, ಜ್ಞಾನ ಸೃಷ್ಟಿ, ಸಂಶೋಧನೆ ಮತ್ತು ಸಮಾಜಮುಖಿ ಚಿಂತನೆಗೆ ವೇದಿಕೆಯಾಗಬೇಕು ಎಂಬ ಆಶಯ ಅವರ ಹಲವು ಭಾಷಣಗಳಲ್ಲಿ ಪ್ರತಿಫಲಿಸುತ್ತದೆ. ಶಿಕ್ಷಣದ ಮೂಲಕ ವ್ಯಕ್ತಿತ್ವ ನಿರ್ಮಾಣ ಮತ್ತು ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡುವ ಅಗತ್ಯವನ್ನು ಅವರು ಪ್ರತಿಪಾದಿಸಿರುವ ವಿಚಾರಗಳು ಕೃತಿಯಲ್ಲಿ ದಾಖಲಾಗಿವೆ.

ಇನ್ನೊಂದು ಕೃತಿ ?ಹೇಮಂತ? ಅವರ ಕುರಿತಾಗಿ ವಿವಿಧ ಗಣ್ಯರು, ಶಿಕ್ಷಣ ತಜ್ಞರು, ಸಹೋದ್ಯೋಗಿಗಳು ಹಾಗೂ ಆತ್ಮೀಯರು ಬರೆದಿರುವ ಲೇಖನಗಳ ಸಂಕಲನವಾಗಿದೆ. ಪ್ರೊ. ಹೇಮಂತ ಕುಮಾರ್ ಅವರೊಂದಿಗೆ ವಿವಿಧ ಹಂತಗಳಲ್ಲಿ ಒಡನಾಡಿದವರು ತಮ್ಮ ಅನುಭವ, ನೆನಪು ಮತ್ತು ಅನಿಸಿಕೆಗಳನ್ನು ಈ ಕೃತಿಯಲ್ಲಿ ದಾಖಲಿಸಿದ್ದಾರೆ.

ಒಬ್ಬ ವ್ಯಕ್ತಿಯ ಸ್ವಂತ ಮಾತುಗಳ ಮೂಲಕ ಅವರ ಚಿಂತನೆಗಳನ್ನು ತಿಳಿದುಕೊಳ್ಳುವುದರ ಜೊತೆಗೆ, ಅವರೊಂದಿಗೆ ಕಾರ್ಯನಿರ್ವಹಿಸಿದವರ ಅನುಭವಗಳ ಮೂಲಕ ಅವರ ವ್ಯಕ್ತಿತ್ವವನ್ನು ಪರಿಚಯಿಸುವ ಅವ ಕಾಶವನ್ನು ಈ ಎರಡು ಕೃತಿಗಳು ಒದಗಿಸುತ್ತವೆ. ಈ ಹಿನ್ನೆಲೆಯಲ್ಲಿ ?ಜ್ಞಾನ ದೇಗುಲದಲ್ಲಿ? ಕೃತಿಯು ಅವರ ವಿಚಾ ರಧಾರೆಯನ್ನು ದಾಖಲಿಸಿದರೆ, ?ಹೇಮಂತ? ಕೃತಿಯು ಅವರ ವ್ಯಕ್ತಿತ್ವವನ್ನು ಇತರರ ಅನುಭವಗಳ ಮೂಲಕ ದಾಖಲಿಸುತ್ತದೆ.

ಪ್ರೊ. ಜಿ. ಹೇಮಂತ ಕುಮಾರ್ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸಿದ್ದು, ಕುಲಪತಿಯಾಗಿ ವಿಶ್ವವಿದ್ಯಾನಿಲಯದ ನೇತೃತ್ವ ವಹಿಸಿದ್ದರು. ಶಿಕ್ಷಣ, ಸಂಶೋಧನೆ ಮತ್ತು ಉನ್ನತ ಶಿಕ್ಷಣದ ಬೆಳವಣಿಗೆಗೆ ಸಂಬಂಧಿಸಿದ ಹಲವು ವಿಷಯಗಳ ಕುರಿತು ಅವರು ವಿವಿಧ ವೇದಿಕೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡಿದ್ದಾರೆ.

ಈ ಎರಡು ಕೃತಿಗಳ ಪ್ರಕಟಣೆಯ ಮೂಲಕ ಅವರ ಶೈಕ್ಷಣಿಕ ಬದುಕಿನ ಹಲವು ವರ್ಷಗಳ ಅನುಭವಗಳು ಮತ್ತು ಚಿಂತನೆಗಳು ದಾಖಲೆಯ ರೂಪದಲ್ಲಿ ಓದುಗರನ್ನು ತಲುಪಿವೆ. ವಿಶೇಷವಾಗಿ ಶಿಕ್ಷಣ ಕ್ಷೇತ್ರದ ಬೆಳವಣಿಗೆ, ವಿಶ್ವವಿದ್ಯಾನಿಲಯಗಳ ಪಾತ್ರ ಮತ್ತು ಶೈಕ್ಷಣಿಕ ಆಡಳಿತದ ಕುರಿತು ಆಸಕ್ತಿ ಹೊಂದಿರುವವರಿಗೆ ?ಜ್ಞಾನ ದೇಗುಲದಲ್ಲಿ? ಕೃತಿ ಉಪಯುಕ್ತವಾಗುವ ಸಾಧ್ಯತೆ ಇದೆ. ಇದೇ ವೇಳೆ, ಪ್ರೊ. ಹೇಮಂತ ಕುಮಾ ಅವರ ವೃತ್ತಿ ಮತ್ತು ಸಾರ್ವಜನಿಕ ಬದುಕಿನ ವಿವಿಧ ಆಯಾಮಗಳನ್ನು ತಿಳಿದುಕೊಳ್ಳಲು ?ಹೇಮಂತ? ಕೃತಿ ನೆರವಾಗಲಿದೆ. ಒಂದರಲ್ಲಿ ಅವರದೇ ಮಾತುಗಳು, ಮತ್ತೊಂದರಲ್ಲಿ ಅವರೊಂದಿಗೆ ಒಡನಾಡಿದವರ ಮಾತುಗಳು–ಈ ವಿಭಿನ್ನ ಸ್ವರೂಪದ ಎರಡು ಕೃತಿಗಳ ಲೋಕಾರ್ಪಣೆಯು ಅವರ ಶೈಕ್ಷಣಿಕ ಬದುಕಿನ ದಾಖಲೆಯಾಗಿ ಗಮನ ಸೆಳೆದಿದೆ.

# ಡಾ. ಹೆಚ್.ಡಿ.ಚೌಡಯ್ಯನವರ 99 ನೇ ಜನ್ಮ ದಿನಾಚರಣೆ:

## ಹೊಳಲು ಶ್ರೀಧರ್ ದಂಪತಿಗೆ ಅಭಿನಂದನೆ



**ಮಂಡ್ಯ:** ತಾಲೂಕಿನ ಹೊಳಲು ಗ್ರಾಮದಲ್ಲಿ ಜಿಲ್ಲೆಯ ಹಿರಿಯ ರಾಜಕೀಯ ಮುತ್ಸದ್ಧಿ ಡಾ.ಹೆಚ್.ಡಿ.ಚೌಡಯ್ಯ ನವರ 99ನೇ ಜನ್ಮ ದಿನವನ್ನು ಗ್ರಾಮದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ತಂತ್ರರ್ಷಿ ಸರ್ ಎಂ ವಿಶ್ವೇಶ್ವರಯ್ಯ ಹಾಗೂ ಡಾ.ಎಚ್ ಡಿ ಚೌಡಯ್ಯನವರ ಪ್ರತಿಮೆಗಳ ನಿರ್ವಹಣಾ ಸಮಿತಿ ಮತ್ತು ಗ್ರಾಮಸ್ಥರ ವತಿಯಿಂದ ಆಚರಿಸಲಾಯಿತು.

ಹೊಳಲಿನ ಶ್ರೀ ಬಲಮುರಿ ಗಣಪತಿ ದೇವಸ್ಥಾನದ ಆವರಣದ ಉದ್ಯಾವನದಲ್ಲಿರುವ ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಶ್ರೀ ಸರ್ ಎಂ ವಿಶ್ವೇಶ್ವರಯ್ಯ ಹಾಗೂ ಡಾ. ಹೆಚ್.ಡಿ.ಚೌಡಯ್ಯನವರ ಪ್ರತಿಮೆ ಪ್ರತಿಮೆಗೆ ವಿಶೇಷ ಪೂಜೆ ಹಾಗೂ ಹೆಚ್ ಡಿ ಚೌಡಯ್ಯನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮುಖಾಂತರ ಹುಟ್ಟು ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಹಾಗೂ ಇದೇ ಸಂದರ್ಭದಲ್ಲಿ ಡಾ. ಚೌಡಯ್ಯನವರ 99ನೇ ಜನ್ಮದಿನಾಚರಣೆಯ ಅಂಗವಾಗಿ ಹೊಳಲು ಶ್ರೀಧರ್ ದಂಪತಿಗಳನ್ನು ಸನ್ಮಾನಿಸಿ ಅಭಿನಂದಿಸಲಾಯಿತು

ನಂತರ ಮಾತನಾಡಿದ ಸಮಿತಿಯ ಪ್ರಧಾನ ಪೋಷಕ ಹಾಗೂ ಮಾಜಿ ಶಾಸಕ ಎಚ್.ಬಿ. ರಾಮು ದಿವಂಗತ ಚೌಡಯ್ಯನವರ ಕೊಡುಗೆಗಳನ್ನು ಸ್ಮರಿಸುವುದು ನಮ್ಮ ಗ್ರಾಮದ ಕರ್ತವ್ಯವಾಗಿದೆ. ಸಮಾಜದ ಲೋಪದೋಷಗಳನ್ನು ತಿದ್ದುವ ನಿಟ್ಟಿನಲ್ಲಿ ಸಮಾಜಕ್ಕೆ, ಈ ಜಿಲ್ಲೆಗೆ ಮತ್ತು ಈ ನಾಡಿಗೆ ಅವರು ಅಪಾರ ಸೇವೆ ಸಲ್ಲಿಸಿದ ಮಹನೀಯರು ನಮ್ಮ ಗ್ರಾಮದವರು ಎಂಬುದು ನಮಗೆ ಹೆಮ್ಮೆಯ ವಿಷಯವಾಗಿದೆ ಎಂದರು.

ಅವರ ತತ್ವ ಮತ್ತು ಆದರ್ಶಗಳನ್ನು ಮುಂದುವರಿಸಿ ಕೊಂಡು ಹೋಗುವುದು ಹಾಗೂ ಎಲ್ಲಾ ರಂಗಗಳಲ್ಲೂ ಅವರ ಗೌರವವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಸನ್ಮಾನಿತರಾದ ಹೊಳಲು ಶ್ರೀಧರ್ ಅವರು ನನ್ನ ಬಾಲ್ಯದ ಗೆಳೆಯರು,ನಾವು ಒಟ್ಟಿಗೆ ವ್ಯಾಸಂಗ ಮಾಡಿದ್ದೇವೆ. ಅವರು ಸಮಾಜಮುಖಿ ಚಿಂತನೆಗಳನ್ನು ಮೈಗೂಡಿಸಿಕೊಂಡು, ಯಶಸ್ವಿ ಉಪನ್ಯಾಸಕರಾಗಿ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಿದ್ದಾರೆ. ಜೊತೆಗೆ ಪ್ರಾಮಾಣಿಕ ಪತ್ರಕರ್ತರಾಗಿ, ಸಾಹಿತಿಗಳಾಗಿ ಸಮಾಜಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ ಎಂದು ಪ್ರಶಂಸಿಸಿದರು.

ಚೌಡಯ್ಯನವರ ತತ್ವಾದರ್ಶ ಪಾಲಿಸೋಣ: ಎಚ್.ಎಲ್. ಶಿವಣ್ಣ ಪ್ರತಿಮೆ ನಿರ್ಮಾಣ ಸಮಿತಿ ಅಧ್ಯಕ್ಷರಾದ ಎಚ್. ಎಲ್. ಶಿವಣ್ಣ ಅವರು ಮಾತನಾಡಿ, ಚೌಡಯ್ಯನವರು ನಮ್ಮ ಹೊಳಲು ಗ್ರಾಮಕ್ಕೆ ನೀಡಿದ ಕೊಡುಗೆಗಳು ಅಪಾರವಾದವು. ಅವರು ನಮ್ಮ ಗ್ರಾಮದ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಅಂತಹ ಮಹನೀಯರನ್ನು ಪ್ರತಿವರ್ಷ ಸ್ಮರಿಸಬೇಕು ಎಂಬ ಉದ್ದೇಶದಿಂದ ಸಮಿತಿಯೊಂದನ್ನು ರಚಿಸಿ, ಅವರ ಪ್ರತಿಮೆಯನ್ನು ಸ್ಥಾಪಿಸಿ, ಪ್ರತಿವರ್ಷ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಾ ಬಂದಿದ್ದೇವೆ ಎಂದರು.

ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸಿದ ಗಣ್ಯರನ್ನು ಸನ್ಮಾನಿಸುವ ಪರಂಪರೆ ನಮ್ಮದಾಗಿದೆ. ಅದೇ ರೀತಿ, ಈ ಬಾರಿ ನಮ್ಮ ಗ್ರಾಮದ ಹೆಮ್ಮೆಯ ಸಾಹಿತಿಗಳು, ನಿವೃತ್ತ ಉಪನ್ಯಾಸಕರು ಪತ್ರಕರ್ತರು ಆದ ಹೊಳಲು ಶ್ರೀಧರ್ ಅವರನ್ನು ಸನ್ಮಾನಿಸಬೇಕೆಂದು ಕಾರ್ಯಕಾರಿ ಮಂಡಳಿಯ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಇಂತಹ ಸಾಧಕರನ್ನು ಗೌರವಿಸುವುದರಿಂದ ನಮ್ಮ ಗ್ರಾಮದ ಕೀರ್ತಿ ಹೆಚ್ಚುತ್ತದೆ ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು.ಅದರಂತೆ ಇಂದು ನಾವು ಶ್ರೀಧರ್ ಅವರಿಗೆ ಅತ್ಯಂತ ಗೌರವಪೂರ್ವಕವಾಗಿ ಸನ್ಮಾನ ಸಲ್ಲಿಸಿದ್ದೇವೆ ಎಂದರು.

ಮುಂದಿನ ವರ್ಷ ಶ್ರೀ ಚೌಡಯ್ಯನವರ ನೂರನೇ ವರ್ಷದ ಸ್ಮರಣೋತ್ಸವವನ್ನು ಹಮ್ಮಿಕೊಳ್ಳಲಿದ್ದೇವೆ. ಆ ಸಂದರ್ಭದಲ್ಲಿ ಹಲವು ವೈವಿಧ್ಯಮಯ ಹಾಗೂ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಈ ಬೃಹತ್ ಕಾರ್ಯಕ್ರಮಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯ ಎಂದರು.

**ಊರಿನ ಗೌರವ ಎಲ್ಲಕ್ಕಿಂತ ಮಿಗಿಲು:** ಹೊಳಲು ಶ್ರೀಧರ್

ಸನ್ಮಾನಿತ ಹೊಳಲು ಶ್ರೀಧರ್ ಅವರು ಮಾತನಾಡಿ, ಚೌಡಯ್ಯನವರ 99ನೇ ಜನ್ಮದಿನದಂದು ಈ ಗೌರವ ಸಲ್ಲುತ್ತಿರುವುದು ತಮ್ಮ ಪಾಲಿಗೆ ಅತ್ಯಂತ ಮಹತ್ವದ ದಿನ ಎಂದರು. ಚೌಡಯ್ಯನವರ ವ್ಯಕ್ತಿತ್ವ, ಶಿಸ್ತು ಮತ್ತು ಪ್ರಾಮಾಣಿಕತೆ ತಮ್ಮ ಮೇಲೆ ಪ್ರಭಾವ ಬೀರಿದೆ ಎಂದು ಸ್ಮರಿಸಿದರು.

# ಮೂಲ ಸಂಸ್ಕೃತಿ ಉಳಿಸಲು ಜಾನಪದ ಮಹೋತ್ಸವಗಳು ಅಗತ್ಯ: ಸಚಿವ



- ಆದಿಚುಂಚನಗಿರಿಯಲ್ಲಿ ಜಾನಪದ ಕಲಾ ಮೇಳ ಸಮಾರೋಪ:
- ಕಲೆ ಮತ್ತು ಸಂಸ್ಕೃತಿ ಪ್ರೋತ್ಸಾಹಿಸುವಲ್ಲಿ ಆದಿಚುಂಚನಗಿರಿ ಮಠದ ಕಾರ್ಯ ಶ್ಲಾಘನೀಯ:

**ನಾಗಮಂಗಲ / ಬೆಳ್ಳೂರು ಕ್ರಾಸ್:** ಜಾನ ಪದ ಕಲೆ ಶಾಶ್ವತವಾಗಿ ಉಳಿಯಲು ಇಂತಹ ಮಹೋತ್ಸವಗಳು ರಾಜ್ಯದ ಎಲ್ಲ ಭಾಗಗಳಲ್ಲಿಯೂ ನಡೆಯಬೇಕು. ಆಗ ಮಾತ್ರವೇ ನಮ್ಮ ಮೂಲ ಸಂಸ್ಕೃತಿ ಶಾಶ್ವತವಾಗಿ ಉಳಿಯಲಿದೆ ಎಂದು ಜಲಸಂಪನ್ಮೂಲ ಸಚಿವರೂ ಆದ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಶ್ರೀ ಆದಿಚುಂಚನಗಿರಿ ಕ್ಷೇತ್ರದ ಮಹಾಸಂಸ್ಥಾನ ಮಠದಲ್ಲಿ ಆಯೋಜಿಸಿದ್ದ ಪದ್ಮಭೂಷಣ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿಯವರ 53ನೇ ವಾರ್ಷಿಕ ಪಟ್ಟಾಭಿಷೇಕ ಮಹೋತ್ಸವ, ಶ್ರೀ ಗುರು ಸಂಸ್ಮರಣೋತ್ಸವ ಮತ್ತು 47ನೇ ವರ್ಷದ ರಾಜ್ಯಮಟ್ಟದ ಶ್ರೀ ಕಾಲಭೈರವೇಶ್ವರ ಜಾನಪದ ಕಲಾ ಮೇಳದ ಸಮಾರೋಪ ಸಮಾರಂಭದಲ್ಲಿ ಸಚಿವರು ಮಾತನಾಡಿದರು.

ಕಲಾವಿದರನ್ನು ಗುರುತಿಸಿ, ಅವರನ್ನು ಗೌರವಿಸುವ ಕೆಲಸದೊಂದಿಗೆ ಅಗತ್ಯ ಸೌಲಭ್ಯಗಳನ್ನು ನೀಡುತ್ತಿರುವ ಆದಿಚುಂಚನಗಿರಿ ಮಠದ ಕಾರ್ಯ ಶ್ಲಾಘನೀಯ ಎಂದರು. ನಿಷ್ಕಲ್ಮಷ ಭಕ್ತಿ, ಪ್ರಾರ್ಥನೆಗಳಿಗೆ ಎಂದಿಗೂ ಫಲ ಸಿಗುತ್ತದೆ. ಎಂತಹ ಫೈವ್ ಸ್ಟಾರ್ ಹೋಟೆಲ್‌ಗಳಲ್ಲಿ ಭಕ್ಷ್ಯ ಭೋಜನ ಸವಿದರೂ ಸಿಗದ ಆತ್ಮತೃಪ್ತಿ ಮತ್ತು ನೆಮ್ಮದಿ ಇಂತಹ ಮಠಮಾನ್ಯ, ದೇವಾಲಯಗಳಲ್ಲಿ ದೊರೆಯುತ್ತಿದೆ. ಹಣ, ಅಧಿಕಾರ ಇದ್ದರೆ ನೆಮ್ಮದಿ ದೊರೆಯಲು ಸಾಧ್ಯವೇ ಇಲ್ಲ. ದೇವರ ಸನ್ನಿಧಿಯೇ ನೆಮ್ಮದಿಯ ತಾಣ. ಇಂತಹ ನೆಮ್ಮದಿಯ ತಾಣದಲ್ಲಿ ನಡೆಯುತ್ತಿರುವ ಜಾನಪದ ಮೇಳವು ಸ್ವರ್ಗಕ್ಕೂ ಮಿಗಿಲು ಎಂದು ತಿಳಿಸಿದರು.

ಕಲೆ, ಸಂಸ್ಕಾರ, ಸಂಸ್ಕೃತಿ, ಶಿಕ್ಷಣ, ಅನ್ನದಾನ... ಹೀಗೆ ಎಲ್ಲ ರೀತಿಯಲ್ಲಿಯೂ ಸೇವೆ ಸಲ್ಲಿಸುತ್ತಿರುವ ಆದಿಚುಂಚನಗಿರಿ ಮಠವು ಇನ್ನುಳಿದ ಮಠಗಳಿಗೆ ಮಾದರಿಯಾಗುವ ಮೂಲಕ ಭದ್ರ ಬುನಾದಿ ಹಾಕಿದೆ. ಈ ಮಠದ ಕೈಂಕರ್ಯಗಳು ಹೀಗೆಯೇ ಮುಂದುವರಿಯಲಿ ಎಂದು ಆಶಿಸಿದರು. ಇದೇ ವೇಳೆ ಜಾನಪದ ಕಲಾವಿದರನ್ನು ಶ್ರೀಗಳೊಟ್ಟಿಗೆ ಸೇರಿ ಸಚಿವರು ಅಭಿನಂದಿಸಿದರು. ಸಮಾರಂಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ, ಮಠದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರಸನ್ನನಾಥ ಸ್ವಾಮೀಜಿ, ಶಾಖ ಮಠದ ಶ್ರೀ ಶೇಖರ ಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಮಂಜುಶ್ರೀ ಸೇರಿದಂತೆ ವಿವಿಧ ಸಂಸ್ಥಾನಗಳ ಮಹಾಸ್ವಾಮೀಜಿಗಳು ಉಪಸ್ಥಿತರಿದ್ದರು.

# ದೌರ್ಜನ್ಯ ತಡೆ ಕಾಯ್ದೆ ಕುರಿತು ಗ್ರಾಮೀಣ ಭಾಗದಲ್ಲಿ ವ್ಯಾಪಕ ಜಾಗೃತಿ: ಡಾ. ಕುಮಾರ



**ಮಂಡ್ಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ಪ್ರತಿಬಂಧ) ಕಾಯ್ದೆಯ ತೀವ್ರತೆ, ವ್ಯಾಪ್ತಿ ಹಾಗೂ ಕಾನೂನು ಪರಿಣಾಮಗಳ ಕುರಿತು ಗ್ರಾಮೀಣ ಜನರಲ್ಲಿ ಸಮಗ್ರ ಅರಿವು ಮೂಡಿಸುವ ಮೂಲಕ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ಪ್ರತಿಬಂಧ ತಿದ್ದುಪಡಿ ಕಾಯ್ದೆ–2015 ಹಾಗೂ ತಿದ್ದುಪಡಿ ನಿಯಮಗಳು–2016ರ ಅನುಷ್ಠಾನಕ್ಕೆ ಸಂಬಂಧಿಸಿದ ಜಿಲ್ಲಾ ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಾಯ್ದೆಯ ಉದ್ದೇಶ, ವ್ಯಾಪ್ತಿ ಹಾಗೂ ಕಾನೂನುಬದ್ಧ ಅವಕಾಶಗಳ ಕುರಿತು ಜನರಲ್ಲಿ ಸ್ಪಷ್ಟ ಅರಿವು ಮೂಡಿಸುವ ಅಗತ್ಯವಿದೆ. ಜಿಲ್ಲೆಯಲ್ಲಿ ದೌರ್ಜನ್ಯ ಪ್ರಕರಣಗಳು ಹೆಚ್ಚು ವರದಿಯಾಗುವ ಗ್ರಾಮಗಳನ್ನು ಗುರುತಿಸಿ, ಅಂತಹ ಪ್ರದೇಶಗಳಲ್ಲಿ ವಿಶೇಷ ಜಾಗೃತಿ ಕಾರ್ಯಕ್ರಮ, ಕಾರ್ಯಾಗಾರ ಹಾಗೂ ಕಾನೂನು ಅರಿವು ಶಿಬಿರಗಳನ್ನು ಆಯೋಜಿಸಬೇಕು. ನೋಂದಾಯಿತ ಪ್ರಗತಿಪರ ಸಂಘ–ಸಂಸ್ಥೆಗಳ ಸಹಭಾಗಿತ್ವವನ್ನೂ ಪಡೆದು ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ನಡೆಸುವಂತೆ ಸೂಚಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಕೆರೆ, ಕಟ್ಟೆ, ದೇವಸ್ಥಾನ ಸೇರಿದಂತೆ ಸಾರ್ವಜನಿಕ ಸ್ಥಳಗಳು ಹಾಗೂ ಸಾರ್ವಜನಿಕ ಬಳಕೆಯ ಅಂಗಡಿಗಳಿಗೆ ಮುಕ್ತ ಪ್ರವೇಶ ಕಲ್ಪಿಸುವುದು ಕಾನೂನುಬದ್ಧ ಹಕ್ಕಾಗಿದೆ. ಸಾರ್ವಜನಿಕ ಸ್ಥಳಗಳಿಗೆ ಪ್ರವೇಶ ನಿರಾಕರಿಸುವುದು ಅಥವಾ ಯಾವುದೇ ರೀತಿಯ ತಾರತಮ್ಯ ಎಸಗುವುದು ಕಂಡುಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು.

ದೌರ್ಜನ್ಯ ಪ್ರಕರಣಗಳ ತನಿಖೆ ಹಾಗೂ ನ್ಯಾಯಾಲಯದ ವಿಚಾರಣೆಯಲ್ಲಿ ಸಾಕ್ಷಿದಾರರ ಪಾತ್ರ ಮಹತ್ವದ್ದಾಗಿದೆ. ಸಾಕ್ಷ್ಯ ನೀಡಲು ಮುಂದೆ ಬರುವ ಸಾಕ್ಷಿದಾರರಲ್ಲಿ ಆತಂಕ ಉಂಟಾಗದಂತೆ ಪೊಲೀಸ್ ಅಧಿಕಾರಿಗಳು ಅಗತ್ಯ ಧೈರ್ಯ ಮತ್ತು ಆತ್ಮವಿಶ್ವಾಸ ತುಂಬಬೇಕು. ನ್ಯಾಯಾಲಯಕ್ಕೆ ಸಾಕ್ಷ್ಯ ನೀಡಲು ಆಗಮಿಸುವವರಿಗೆ ಸೂಕ್ತ ರಕ್ಷಣೆ ಹಾಗೂ ಅಗತ್ಯ ಸಹಕಾರ ದೊರೆಯುವಂತೆ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೇ ದೌರ್ಜನ್ಯ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಪಡಿಸುವಂತಹ ಪರಿಸ್ಥಿತಿ ಉಂಟಾಗದಂತೆ ಕಾಯ್ದೆಯ ಕುರಿತು ಜನರಲ್ಲಿ ಸ್ಪಷ್ಟ ಅರಿವು ಮೂಡಿಸಬೇಕು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಜಾಗೃತಿ ಮತ್ತು ಉಸ್ತುವಾರಿ ಸಮಿತಿಗಳ ಸದಸ್ಯರು ಹೆಚ್ಚಿನ ಮುತುವರ್ಜಿ ವಹಿಸಿ ಕಾರ್ಯನಿರ್ವಹಿಸುವಂತೆ ತಿಳಿಸಿದರು.

ಸಾರ್ವಜನಿಕ ದೇವಸ್ಥಾನಗಳಿಗೆ ಎಲ್ಲರಿಗೂ ಮುಕ್ತ ಪ್ರವೇಶದ ಹಕ್ಕಿದ್ದು, ಯಾವುದೇ ವ್ಯಕ್ತಿ ಅಥವಾ ಸಮುದಾಯದ ದೇವಸ್ಥಾನ ಪ್ರವೇಶಕ್ಕೆ ಅಡ್ಡಿಪಡಿಸುವುದು ಕಂಡುಬಂದಲ್ಲಿ ಕಾನೂನುಬದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

**ಗ್ರಾಮ ಪಂಚಾಯಿತಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಜಾಗೃತಿ:** ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ಮಾತನಾಡಿ, ದೌರ್ಜನ್ಯ ತಡೆ ಕಾಯ್ದೆ ಕುರಿತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಹಾಗೂ ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕಾನೂನು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ದೌರ್ಜನ್ಯ ಪ್ರಕರಣಗಳು ಹೆಚ್ಚು ವರದಿಯಾಗುವ ಗ್ರಾಮಗಳನ್ನು ಗುರುತಿಸಿ ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಕಾನೂನಿನ ಅರಿವು, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಸಂವಿಧಾನಾತ್ಮಕ ಹಕ್ಕುಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಮೂಲಕ ದೌರ್ಜನ್ಯ ಪ್ರಕರಣಗಳ ತಡೆಗೆ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ., ಉಪವಿಭಾಗಾಧಿಕಾರಿ ಶಿವಮೂರ್ತಿ, ಮಂಡ್ಯ ಉಪವಿಭಾಗದ ಡಿವೈಎಸ್ಪಿ ಹೆಚ್. ಲಕ್ಷ್ಮೀನಾರಾಯಣ ಪ್ರಸಾದ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಶ್ರೀನಿವಾಸ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಯುವಜನರಲ್ಲಿ ವೈಚಾರಿಕ ಚಿಂತನೆ ಬೆಳೆಸುವ ಸಾಹಿತ್ಯಿಕ ಚಟುವಟಿಕೆ ಅಗತ್ಯ: ಕಾ.ತ. ಚಿಕ್ಕಣ್ಣ





**ಮಂಡ್ಯ:** ಕನಕದಾಸರು, ತತ್ವಪದಕಾರರು, ಶರಣರು ಹಾಗೂ ಭಕ್ತಿ ಸಾಹಿತ್ಯದ ಮೌಲ್ಯಯುತ ವಿಚಾರಗಳನ್ನು ಯುವಜನತೆ ಮತ್ತು ಸಮಾಜಕ್ಕೆ ತಲುಪಿಸುವ ಉದ್ದೇಶದಿಂದ ಯುವ ಸಮುದಾಯ, ಸಾರ್ವಜನಿಕರು ಹಾಗೂ ವಿದ್ವಾಂಸರನ್ನು ಒಳಗೊಂಡಂತೆ ವಿವಿಧ ಹಂತಗಳಲ್ಲಿ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದು ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂತ ಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಬೆಂಗಳೂರು ಹಾಗೂ ಮಂಡ್ಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಮಂಡ್ಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಅಂತರ ಕಾಲೇಜು ಸಂಸ್ಕೃತಿ ಪುನಶ್ಚೇತನ ಶಿಬಿರ ಹಾಗೂ ಸ್ಪರ್ಧಾ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಿಗಾಗಿ ಜಿಲ್ಲಾ ಮಟ್ಟದಲ್ಲಿ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಸಾಹಿತ್ಯ ಕೃತಿಗಳನ್ನು ಓದಿ, ಅರ್ಥೈಸಿಕೊಂಡು ಅದರ ಆಶಯವನ್ನು ಗ್ರಹಿಸುವ ಸಾಮರ್ಥ್ಯ ಬೆಳೆಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಯುವಜನರಲ್ಲಿ ಧೈರ್ಯ, ಸೃಜನಶೀಲತೆ ಮತ್ತು ವೈಚಾರಿಕ ಚಿಂತನೆಯನ್ನು ಬೆಳೆಸಬೇಕಿದೆ ಎಂದರು.

ಪ್ರಬಂಧ ಸ್ಪರ್ಧೆಯಲ್ಲಿ ಜಿಲ್ಲೆಯ ವಿವಿಧ ಕಾಲೇಜುಗಳ 45 ವಿದ್ಯಾರ್ಥಿಗಳು ಭಾಗವಹಿಸಿದ್ದು, ಅವುಗಳಲ್ಲಿ ಅತ್ಯುತ್ತಮ 15 ಪ್ರಬಂಧಗಳನ್ನು ಆಯ್ಕೆ ಮಾಡಲಾಗುವುದು ಎಂದು ತಿಳಿಸಿದರು.

ಕನಕದಾಸರು, ಬಸವಣ್ಣ, ಬುದ್ಧ, ಮಹಾತ್ಮ ಗಾಂಧೀಜಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳು ಇಂದಿನ ಸಮಾಜಕ್ಕೆ ಹೇಗೆ ಪ್ರಸ್ತುತವಾಗಿವೆ ಎಂಬ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದವನ್ನೂ ಆಯೋಜಿಸಲಾಗಿದೆ. ಶಿಕ್ಷಣವನ್ನು ಕೇವಲ ಅಂಕಗಳು ಮತ್ತು ಉದ್ಯೋಗಕ್ಕೆ ಸೀಮಿತಗೊಳಿಸದೆ, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಚಲನಚಿತ್ರ ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಅವಕಾಶ ಕಲ್ಪಿಸಬೇಕು. ಸಮಾಜದಲ್ಲಿ ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳೊಂದಿಗೆ ಬದುಕುವ ಮನೋಭಾವ ಬೆಳೆಸುವುದು ಅಗತ್ಯ ಎಂದು ಹೇಳಿದರು.

**ಮೌಲ್ಯಯುತ ಸಾಹಿತ್ಯ ಯುವಪೀಳಿಗೆಗೆ ಪರಿಚಯವಾಗಲಿ:** ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಂಡ್ಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ. ಶಿವಚಿತ್ತಪ್ಪ ಮಾತನಾಡಿ, ಕಳೆದ ಒಂದೂವರೆ ವರ್ಷದಲ್ಲಿ ಮಂಡ್ಯ ವಿಶ್ವವಿದ್ಯಾಲಯವು ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮುನ್ನಡೆಯುತ್ತಿದೆ. ಕರ್ನಾಟಕ ಸರ್ಕಾರದ ಖಇಕ–2024 ಯೋಜನೆಯ ಆಶಯದಂತೆ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ತರಗತಿ ಪಾಠಗಳ ಜೊತೆಗೆ ಪಠ್ಯೇತರ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಗೂ ಆದ್ಯತೆ ನೀಡಬೇಕು ಎಂದರು.

ವಚನ ಸಾಹಿತ್ಯ, ಶರಣ ಸಾಹಿತ್ಯ ಹಾಗೂ ಸಂತಕವಿಗಳ ತತ್ವಪದಗಳಲ್ಲಿರುವ ಮಾನವೀಯ ಮೌಲ್ಯಗಳನ್ನು ಯುವಪೀಳಿಗೆಗೆ ಪರಿಚಯಿಸುವ ಅಗತ್ಯವಿದೆ. ಕನಕದಾಸರ ತತ್ವಪದದ ಆಶಯವನ್ನು ಉಲ್ಲೇಖಿಸಿದ ಅವರು, ಬಾಹ್ಯ ಆಡಂಬರಕ್ಕಿಂತ ಅಂತರಂಗದ ಶುದ್ಧತೆ, ಸತ್ಯ ಹಾಗೂ ಸನ್ಮಾರ್ಗದಲ್ಲಿ ನಡೆಯುವುದು ಮುಖ್ಯ. ಸಂಶೋಧನೆ ಸೇರಿದಂತೆ ದೈನಂದಿನ ಬದುಕಿನಲ್ಲಿಯೂ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿದರು. ಮಂಡ್ಯ ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಪ್ರೊ. ವೆಂಕಟರಮಣ ಜಿ.ವಿ., ಉಪಕುಲಸಚಿವರು (ಶೈಕ್ಷಣಿಕ) ಡಾ. ಶಿವರಾಮು ಎಂ.ವೈ., ಪ್ರಧಾನ ಸಂಚಾಲಕ ಕೀಲಾರ ಕೃಷ್ಣೇಗೌಡ, ಜಿ.ಡಿ. ಶಿವರಾಜು, ಉಪಸಂಚಾಲಕ ಚಕ್ಕರೆ ಶಿವಶಂಕರ್, ಕನ್ನಡ ಪ್ರಾಧ್ಯಾಪಕಿ ಉಷಾರಾಣಿ ಸೇರಿದಂತೆ ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ಸ್ಥಿತಪ್ರಜ್ಞರಾಗಿರಿ, ಸಾವನ್ನು ಗೆಲ್ಲಿ




ಸ್ಥಿತಪ್ರಜ್ಞನೆಂದರೆ ಅಲೆಗಳ ನಡುವಿನ ದೀಪಸ್ತಂಭ. ಹೊರಗೆ ಗಾಳಿ ಬೀಸಿದರೂ ಒಳಗಿನ ಜ್ಯೋತಿ ಅಲುಗಾಡದು. ಇಂತಹ ಸಮಚಿತ್ತವು ಹೃದಯ ಮೆದುಳಿನ ಹೊಂದಾಣಿಕೆಯನ್ನು ಸರಿಪಡಿಸಿ ನಾಡಿಮಿಡಿತವನ್ನು ಕ್ರಮಗೊಳಿಸುತ್ತದೆ. ಆಗ ಯೌವನದ ಕಣವಾದ ಡಿಎಚ್‌ಇಎ ಹೆಚ್ಚಿ ದೇಹದ ತುಕ್ಕು ತಗ್ಗುತ್ತದೆ. ಸಾಕ್ಷಿಭಾವದಿಂದ ಬದುಕುವವರ ಜೀವಶಕ್ತಿಯ ಮೂಲ ಮೈಟೊಕಾಂಡ್ರಿಯ ಚುರುಕಾಗುತ್ತದೆ ಎಂದು ಸಂಶೋಧನೆ ಹೇಳುತ್ತದೆ.

ಸ್ಥಿತಪ್ರಜ್ಞರಿರುವ ಬೀದಿಯೇ ಶಾಂತಿಯ ತೋಟ. ಬೆಲೆ ಏರಿದರೂ ಅಂಗಡಿಯವನು ನಗು ಬೀರಿದರೆ ಪೇಟೆಯ ಗದ್ದಲ ತಣಿಯುತ್ತದೆ. ಸೋಲು ಗೆಲುವು ಲೆಕ್ಕಿಸದೆ ಆಟ ಕಲಿಸುವ ತರಬೇತುದಾರ ಮಕ್ಕಳಿಗೆ ಸೋಲದ ಗುಣ ಕಲಿಸುತ್ತಾನೆ. ಮಳೆ ಬಾರದಿದ್ದರೂ ಬಾವಿ ತೋಡುವ ಹಿರಿಯ ಊರಿಗೆ ದುಡಿಮೆಯ ಕಿಚ್ಚು ಹಚ್ಚುತ್ತಾನೆ.

ಅದನ್ನು ಸಾಧಿಸುವುದು ಅಭ್ಯಾಸದಿಂದ. ಸಂಜೆ ಗಂಟೆಯ ನಾದವನ್ನು ಸಾಕ್ಷಿಯಾಗಿ ಆಲಿಸಿ. ಸುದ್ದಿಗಳನ್ನು ಹಿಗ್ಗು ಕುಗ್ಗಿಲ್ಲದೆ ನೋಡಿ. ಸಿಕ್ಕರೆ ಸಂತೋಷ, ಸಿಗದಿದ್ದರೆ ಸರಿ ಎಂದು ಒಂದೇ ತಕ್ಕಡಿಯಲ್ಲಿ ಸ್ವೀಕರಿಸಿ. ರಾತ್ರಿ ಮೂರು ಘಟನೆಗಳನ್ನು ತೀರ್ಪಿಲ್ಲದೆ ನೆನೆಯಿರಿ. ಹಿಗ್ಗು ಕುಗ್ಗು ಕಳೆದ ಮನಸ್ಸಿಗೆ ಸಾವು ಕೂಡ ಪ್ರಯಾಣದ ನಿಲ್ದಾಣ. ದೇಹದ ಅಂತ್ಯವೆಂದರೆ ಬೆಳಕಿನ ಕೋಣೆಯಿಂದ ವಿಶಾಲ ಆಕಾಶಕ್ಕೆ ಜಿಗಿತ. ಈ ಸಮತೋಲನವೇ ಸಾವನ್ನು ಗೆಲ್ಲುವ ವಿದ್ಯೆ.

ಅಂಕಣ-31

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

87479 69381

# ಹೃದಯವಿಲ್ಲದ ಶಿಕ್ಷಣ ವ್ಯವಸ್ಥೆ: ಶಾಲೆ-ಕಾಲೇಜುಗಳಿಗೇಕೆ ಗ್ರಂಥಾಲಯ: ಗ್ರಂಥಪಾಲಕ



ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ

"ಗ್ರಂಥಾಲಯವು ಯಾವುದೇ ಶೈಕ್ಷಣಿಕ ಸಂಸ್ಥೆಯ ಹೃದಯವಿದ್ದಂತೆ" ಎಂಬುದು ಶಿಕ್ಷಣ ತಜ್ಞರ ಒಮ್ಮತದ ಅಭಿಪ್ರಾಯ. ಆದರೆ, ಪ್ರಸ್ತುತ ಕರ್ನಾಟಕದ ಪ್ರಾಥಮಿಕ, ಪ್ರೌಢಶಾಲೆಗಳು ಹಾಗೂ ಕಾಲೇಜುಗಳ ವಾಸ್ತವ ಸ್ಥಿತಿಯನ್ನು ಗಮನಿಸಿದರೆ, ನಮ್ಮ ಶಿಕ್ಷಣ ವ್ಯವಸ್ಥೆಯು 'ಹೃದಯ'ವಿಲ್ಲದೆಯೇ ಯಾಂತ್ರಿಕವಾಗಿ ಸಾಗುತ್ತಿದೆ ಎಂಬ ಕಟುಸತ್ಯ ಅರಿವಾಗುತ್ತದೆ. ಸ್ಪರ್ಧಾತ್ಮಕ ಜಗತ್ತಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವ ಭರದಲ್ಲಿ, ಅವರಲ್ಲಿ ಓದುವ ಸಂಸ್ಕೃತಿಯನ್ನು ಬೆಳೆಸುವ ಗ್ರಂಥಾಲಯಗಳು ಮತ್ತು ಅದಕ್ಕೆ ಮಾರ್ಗದರ್ಶನ ನೀಡಬೇಕಾದ ಗ್ರಂಥಪಾಲಕರನ್ನು ಸರ್ಕಾರ ಸಂಪೂರ್ಣವಾಗಿ ನಿರ್ಲಕ್ಷಿಸಿದೆ.

**ವಾಸ್ತವದ ಕನ್ನಡಿ ಮತ್ತು ಆಘಾತಕಾರಿ ಅಂಕಿ–ಅಂಶಗಳು**

ರಾಷ್ಟ್ರೀಯ ಮಟ್ಟದ ಶೈಕ್ಷಣಿಕ ವರದಿಗಳಾದ **UDISE (Unified District Information System for Education)** ಮತ್ತು ಂಖಇಖ ದತ್ತಾಂಶಗಳ ಆಧಾರದ ಮೇಲೆ ಕರ್ನಾಟಕದ ಶಾಲಾ–ಕಾಲೇಜುಗಳ ಗ್ರಂಥಾಲಯಗಳ ಸ್ಥಿತಿಯನ್ನು ವಿಶ್ಲೇಷಿಸಿದರೆ ಚಿತ್ರಣ ನಿರಾಶಾದಾಯಕವಾಗಿದೆ:

**ಕಪಾಟುಗಳಿಗೇ ಸೀಮಿತವಾದ ಪುಸ್ತಕಗಳು:** ರಾಜ್ಯದ ಬಹುಪಾಲು (ಶೇ. 70ಕ್ಕೂ ಹೆಚ್ಚು) ಸರ್ಕಾರಿ ಶಾಲೆಗಳಲ್ಲಿ ಗ್ರಂಥಾಲಯ ಎಂದರೆ ಕೇವಲ ಒಂದು ಕಪಾಟು. ಪುಸ್ತಕಗಳನ್ನು ತಂದು ಬೀಗ ಹಾಕಿಡಲಾಗುತ್ತದೆಯೇ ಹೊರತು, ವಿದ್ಯಾರ್ಥಿಗಳಿಗೆ ಕುಳಿತು ಓದಲು ಸುಸಜ್ಜಿತವಾದ 'ಓದುವ ಕೋಣೆ' (Reading Room) ಗಳಿಲ್ಲ.

**ಹುದ್ದೆಯೇ ಇಲ್ಲದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು:** ಅತಿ ದೊಡ್ಡ ದುರಂತವೆಂದರೆ, ಕರ್ನಾಟಕದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವೃತ್ತಿಪರ 'ಗ್ರಂಥಪಾಲಕ' **(Librarian)** ಎಂಬ ಹುದ್ದೆಯೇ ಅಸ್ತಿತ್ವದಲ್ಲಿಲ್ಲ. ಶಿಕ್ಷಕರೇ ಬಿಡುವಿನ ವೇಳೆಯಲ್ಲಿ ಪುಸ್ತಕ ವಿತರಿಸಬೇಕಾದ ಅನಿವಾರ್ಯತೆ ಇದೆ.

**ಹೆಸರಿಗಷ್ಟೇ ಕಾಲೇಜು ಗ್ರಂಥಾಲಯಗಳು:** ಪದವಿಪೂರ್ವ (ಕಗಅ) ಮತ್ತು ಪದವಿ ಕಾಲೇಜುಗಳಲ್ಲಿ ಗ್ರಂಥಾಲಯಗಳಿದ್ದರೂ, ರಾಜ್ಯದ ನೂರಾರು ಕಾಲೇಜುಗಳಲ್ಲಿ ತರಬೇತಿ ಹೊಂದಿದ **(B.Lib / M.Lib)** ಖಾಯಂ ಗ್ರಂಥಪಾಲಕರಿಲ್ಲ. ಅತಿಥಿ ಗ್ರಂಥಪಾಲಕರು ಅಥವಾ ಗುಮಾಸ್ತರೇ ಇದರ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ.

**ಗ್ರಂಥಾಲಯ ಮತ್ತು ಗ್ರಂಥಪಾಲಕರು ಏಕೆ ಅತ್ಯಗತ್ಯ?:** ಕೇವಲ ಪಠ್ಯಪುಸ್ತಕಗಳನ್ನು ಉರುಹೊಡೆಯುವುದರಿಂದ ವಿದ್ಯಾರ್ಥಿಯ ಸರ್ವಾಂಗೀಣ ವಿಕಾಸ ಸಾಧ್ಯವಿಲ್ಲ.

1. ಸ್ವತಂತ್ರ ಚಿಂತನೆಯ ಬೆಳವಣಿಗೆ: ಪಠ್ಯೇತರ ಓದು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಪ್ರಶ್ನಿಸುವ ಮನೋಭಾವ ಮತ್ತು ಸಂಶೋಧನಾ ಪ್ರವೃತ್ತಿಯನ್ನು ಜಾಗೃತಗೊಳಿಸುತ್ತದೆ.
2. ಜೀವಂತ ಮಾರ್ಗದರ್ಶಿ: ಕೇವಲ ಪುಸ್ತಕಗಳನ್ನು ಜೋಡಿಸಿಟ್ಟರೆ ಅದು ಗ್ರಂಥಾಲಯವಾಗುವುದಿಲ್ಲ; ಅದೊಂದು ಉಗ್ರಾಣವಾಗುತ್ತದೆ ಅಷ್ಟೇ. ವಿದ್ಯಾರ್ಥಿಗಳ ವಯಸ್ಸು ಮತ್ತು ಆಸಕ್ತಿಗೆ ತಕ್ಕಂತೆ ಸೂಕ್ತ ಪುಸ್ತಕಗಳನ್ನು ಪರಿಚಯಿಸಲು, ಓದುವ ಹವ್ಯಾಸವನ್ನು ಮೈಗೂಡಿಸಲು ವೃತ್ತಿಪರ ಗ್ರಂಥಪಾಲಕನ ಅಗತ್ಯವಿದೆ.
3. ಮಾಹಿತಿ ತಂತ್ರಜ್ಞಾನದ ಸೇತುವೆ: ಇಂದಿನ ಡಿಜಿಟಲ್ ಯುಗದಲ್ಲಿ, ಗ್ರಾಮೀಣ ವಿದ್ಯಾರ್ಥಿಗಳಿಗೆ ಇ-ಪುಸ್ತಕಗಳು, ಇಂಟರ್ನೆಟ್ ಮತ್ತು ಜಾಗತಿಕ ಜ್ಞಾನವನ್ನು ಪರಿಚಯಿಸಲು ತರಬೇತಿ ಹೊಂದಿದ ಗ್ರಂಥಪಾಲಕರು ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾರೆ.

> **"ಗ್ರಂಥಪಾಲಕರಿಲ್ಲದ ಗ್ರಂಥಾಲಯವು, ಗುರುವಿಲ್ಲದ ಗುರುಕುಲದಷ್ಟೇ ಅಪೂರ್ಣ."**

**ಸರ್ಕಾರದ ಮುಂದಿರುವ ತುರ್ತು ಕ್ರಮಗಳು**

**ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರವು ಈ ಕೆಳಗಿನ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕಿದೆ:**

ಹುದ್ದೆಗಳ ಸೃಷ್ಟಿ ಮತ್ತು ನೇಮಕಾತಿ: ಪ್ರತಿ ಪ್ರೌಢಶಾಲೆಗೂ ಕಡ್ಡಾಯವಾಗಿ ಒಬ್ಬ ವೃತ್ತಿಪರ ಗ್ರಂಥಪಾಲಕನನ್ನು ನೇಮಿಸಲು ಹೊಸ ಹುದ್ದೆಗಳನ್ನು ಸೃಷ್ಟಿಸಬೇಕು. ಇದರಿಂದ ಗ್ರಂಥಾಲಯ ವಿಜ್ಞಾನದಲ್ಲಿ ಪದವಿ ಪಡೆದು ನಿರುದ್ಯೋಗಿಗಳಾಗಿರುವ ಸಾವಿರಾರು ಯುವಜನರಿಗೂ ಉದ್ಯೋಗ ದೊರೆಯುತ್ತದೆ.

* ಮೂಲಸೌಕರ್ಯ ಅಭಿವೃದ್ಧಿ: ಪ್ರತಿ ಶಾಲೆಯಲ್ಲಿಯೂ ಕನಿಷ್ಠ 40 ವಿದ್ಯಾರ್ಥಿಗಳು ಏಕಕಾಲದಲ್ಲಿ ಕುಳಿತು ಓದಬಹುದಾದ ಸುಸಜ್ಜಿತ ಓದುವ ಕೋಣೆ, ಪೀಠೋಪಕರಣಗಳು ಮತ್ತು ಬೆಳಕಿನ ವ್ಯವಸ್ಥೆಯನ್ನು ಕಲ್ಪಿಸಬೇಕು.
* ಕಡ್ಡಾಯ 'ಗ್ರಂಥಾಲಯ ಅವಧಿ': ಶಾಲಾ ವೇಳಾಪಟ್ಟಿಯಲ್ಲಿ ವಾರಕ್ಕೆ ಕನಿಷ್ಠ ಎರಡು ಅವಧಿಗಳನ್ನು **(Library Periods)** ಕಡ್ಡಾಯಗೊಳಿಸಿ, ಆ ಸಮಯದಲ್ಲಿ ಮಕ್ಕಳು ಕಡ್ಡಾಯವಾಗಿ ಪಠ್ಯೇತರ ಪುಸ್ತಕಗಳನ್ನು ಓದುವಂತೆ ನೋಡಿಕೊಳ್ಳಬೇಕು.

ಜ್ಞಾನದ ದೇಗುಲಗಳಾದ ಶಾಲೆಗಳು ಕೇವಲ ಅಂಕಗಳನ್ನು ನೀಡುವ ಕಾರ್ಖಾನೆಗಳಾಗಬಾರದು. ಭವಿಷ್ಯದ ಪ್ರಬುದ್ಧ ಪ್ರಜೆಗಳನ್ನು ರೂಪಿಸುವ ನಿಟ್ಟಿನಲ್ಲಿ, ಸರ್ಕಾರವು ಶಾಲಾ–ಕಾಲೇಜುಗಳ 'ಹೃದಯ'ವಾದ ಗ್ರಂಥಾಲಯಗಳಿಗೆ ಮರುಜೀವ ನೀಡಬೇಕಿದೆ. ತರಬೇತಿ ಹೊಂದಿದ ಗ್ರಂಥಪಾಲಕರ ನೇಮಕಾತಿಯೇ ಈ ದಿಸೆಯಲ್ಲಿ ಮೊದಲ ಮತ್ತು ಅತ್ಯಂತ ಪ್ರಮುಖ ಹೆಜ್ಜೆಯಾಗಿದೆ.

ಗ್ರಂಥಪಾಲಕರ ಹುದ್ದೆಗಳ ಭರ್ತಿ: ಬೀದಿಗಿಳಿದು ಹೋರಾಡುವುದು ಅನಿವಾರ್ಯವೇಕೆ?

ಅಕ್ಟೋಬರ್ 05, 2026 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ "ಗ್ರಂಥಪಾಲಕರ ಹುದ್ದೆ ಭರ್ತಿ ಮಾಡಿ" ಹೋರಾಟವು ಕೇವಲ ನಿರುದ್ಯೋಗಿಗಳ ಉದ್ಯೋಗದ ಬೇಡಿಕೆಯಲ್ಲ, ಬದಲಾಗಿ ನಮ್ಮ ಸರ್ಕಾರಿ ಶಾಲಾ–ಕಾಲೇಜುಗಳ ಗುಣಮಟ್ಟವನ್ನು ಉಳಿಸಿಕೊಳ್ಳುವ ಮಹತ್ವದ ಹೆಜ್ಜೆಯಾಗಿದೆ. ಶಿಕ್ಷಣದ ಹಕ್ಕಿಗಾಗಿ ಮತ್ತು ಯುವಜನತೆಯ ಉದ್ಯೋಗದ ಹಕ್ಕಿಗಾಗಿ ನಡೆಯುತ್ತಿರುವ ಈ ಪ್ರತಿಭಟನೆ ಪ್ರಸ್ತುತ ಶೈಕ್ಷಣಿಕ ವ್ಯವಸ್ಥೆಯಲ್ಲಿ ಅನಿವಾರ್ಯವಾಗಿದೆ.

ಹೋರಾಟವೇಕೆ ಅಗತ್ಯ ಎಂಬುದರ ಹಿಂದಿನ ಪ್ರಮುಖ ಕಾರಣಗಳು ಇಲ್ಲಿವೆ:

**ಗ್ರಂಥಾಲಯ ವಿಜ್ಞಾನ ಪದವೀಧರರ ಶೋಚನೀಯ ಸ್ಥಿತಿ:** ಸಾವಿರಾರು ಯುವಕ–ಯುವತಿಯರು ಬಿ.ಲಿಬ್ (B.Lib) ಮತ್ತು ಎಂ.ಲಿಬ್ (M.Lib) ಪದವಿಗಳನ್ನು ಪಡೆದು, ಸರ್ಕಾರಿ ಹುದ್ದೆಗಳ ನಿರೀಕ್ಷೆಯಲ್ಲಿದ್ದಾರೆ. ದಶಕಗಳಿಂದ ನೇಮಕಾತಿ ಪ್ರಕ್ರಿಯೆಗಳು ಸ್ಥಗಿತಗೊಂಡಿರುವುದರಿಂದ ಅಥವಾ ಹುದ್ದೆಗಳನ್ನೇ ಸೃಷ್ಟಿಸದಿರುವುದರಿಂದ, ಉನ್ನತ ವ್ಯಾಸಂಗ ಮಾಡಿದ ಈ ವೃತ್ತಿಪರರು ನಿರುದ್ಯೋಗಿಗಳಾಗಿ ಅಥವಾ ಅತಿ ಕಡಿಮೆ ವೇತನಕ್ಕೆ ದುಡಿಯುವ ಅನಿವಾರ್ಯತೆಗೆ ಸಿಲುಕಿದ್ದಾರೆ.

**ಸರ್ಕಾರದ ದಿವ್ಯ ನಿರ್ಲಕ್ಷ್ಯ ಮತ್ತು ಸುಳ್ಳು ಭರವಸೆಗಳು:** ಸರ್ಕಾರಗಳು ಬದಲಾದರೂ ಗ್ರಂಥಾಲಯಗಳ ಅಭಿವೃದ್ಧಿ ಮತ್ತು ಗ್ರಂಥಪಾಲಕರ ನೇಮಕಾತಿಯ ವಿಷಯದಲ್ಲಿ ಕೇವಲ ಭರವಸೆಗಳು ಮಾತ್ರ ಸಿಗುತ್ತಿವೆ. ಶಾಲೆಗಳಲ್ಲಿ 'ಓದುವ ಹಬ್ಬ'ದಂತಹ ಕಾರ್ಯಕ್ರಮಗಳನ್ನು ಮಾಡುವ ಸರ್ಕಾರ, ಆ ಓದಿಗೆ ದಾರಿದೀಪವಾಗಬೇಕಾದ ಗ್ರಂಥಪಾಲಕರನ್ನು ನೇಮಿಸಲು ಹಿಂದೇಟು ಹಾಕುತ್ತಿರುವುದು ಸರ್ಕಾರದ ಇಬ್ಬಗೆಯ ನೀತಿಯನ್ನು ಎತ್ತಿತೋರಿಸುತ್ತದೆ.

**ಬಡ ಮತ್ತು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನ್ಯಾಯ:** ಖಾಸಗಿ ಶಾಲೆಗಳಲ್ಲಿ ಸುಸಜ್ಜಿತ ಗ್ರಂಥಾಲಯ ಮತ್ತು ನುರಿತ ಗ್ರಂಥಪಾಲಕರಿರುತ್ತಾರೆ. ಆದರೆ, ಸರ್ಕಾರಿ ಶಾಲೆಗಳನ್ನು ನಂಬಿರುವ ಗ್ರಾಮೀಣ ಮತ್ತು ಬಡ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡಿಕೊಡುವ, ಓದಿನ ರುಚಿ ಹತ್ತಿಸುವ ಮಾರ್ಗದರ್ಶಕರೇ ಇಲ್ಲ. ಇದು ಗ್ರಾಮೀಣ ವಿದ್ಯಾರ್ಥಿಗಳನ್ನು ಜ್ಞಾನದ ವಿಸ್ತಾರದಿಂದ ವಂಚಿತರನ್ನಾಗಿಸುತ್ತಿದೆ.

**ಶಿಕ್ಷಕರ ಮೇಲಿನ ಅನಗತ್ಯ ಹೊರೆ:** ಗ್ರಂಥಪಾಲಕರಿಲ್ಲದ ಕಾರಣ, ಶಾಲೆಯ ಇತರ ಶಿಕ್ಷಕರೇ ಗ್ರಂಥಾಲಯದ ಉಸ್ತುವಾರಿ ನೋಡಿಕೊಳ್ಳಬೇಕಾಗಿದೆ. ಇದು ಶಿಕ್ಷಕರ ಬೋಧನಾ ಸಮಯವನ್ನು ಕಸಿದುಕೊಳ್ಳುವುದರ ಜೊತೆಗೆ, ಗ್ರಂಥಾಲಯದ ನಿರ್ವಹಣೆಯೂ ಸಮರ್ಪಕವಾಗಿ ಆಗದಂತೆ ಮಾಡುತ್ತಿದೆ. ವೃತ್ತಿಪರ ಗ್ರಂಥಪಾಲಕರಿದ್ದರೆ ಮಾತ್ರ ಪುಸ್ತಕಗಳ ವೈಜ್ಞಾನಿಕ ವರ್ಗೀಕರಣ ಮತ್ತು ವಿತರಣೆ ಸಾಧ್ಯ.

**ನ್ಯಾಯಯುತ ಬೇಡಿಕೆಗಳಿಗಾಗಿ ಒಗ್ಗಟ್ಟಿನ ಪ್ರದರ್ಶನ:** ಸಮಸ್ಯೆಗಳನ್ನು ಮನವಿಗಳ ಮೂಲಕ ತಿಳಿಸಿದರೂ ಸ್ಪಂದಿಸದ ವ್ಯವಸ್ಥೆಗೆ ಎಚ್ಚರಿಕೆ ನೀಡಲು ಬೀದಿಗಿಳಿಯುವುದು ಪ್ರಜಾಪ್ರಭುತ್ವದಲ್ಲಿ ಅನಿವಾರ್ಯ. "ಹೃದಯವಿಲ್ಲದ ಶಿಕ್ಷಣ ವ್ಯವಸ್ಥೆ"ಗೆ ಮರುಜೀವ ನೀಡಲು, ಪುಸ್ತಕ ಮತ್ತು ವಿದ್ಯಾರ್ಥಿಯ ನಡುವೆ ಬೆಸುಗೆ ಹಾಕುವ ಗ್ರಂಥಪಾಲಕರ ಹುದ್ದೆಗಳನ್ನು ತಕ್ಷಣವೇ ಮಂಜೂರು ಮಾಡಿ, ಭರ್ತಿ ಮಾಡಬೇಕಿದೆ.

ಜ್ಞಾನದ ದೇಗುಲಗಳನ್ನು ರಕ್ಷಿಸುವ ಈ ಹೋರಾಟದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿ, ಶಿಕ್ಷಕ, ಪೋಷಕ ಮತ್ತು ಸಾಹಿತ್ಯ ಪ್ರೇಮಿಗಳು ಕೈಜೋಡಿಸುವುದು ಇಂದಿನ ತುರ್ತು. ಈ ಕುರಿತು ಸಂಬಂಧಪಟ್ಟ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಈ ಬೇಡಿಕೆಗೆ ಹೇಗೆ ಸ್ಪಂದಿಸುತ್ತಾರೆ ಕಾದುನೋಡೋಣ.



# ಮೂರು ವಿಭಿನ್ನ ಖಂಡಗಳ ಮಹಿಳೆಯರು... ಒಂದು ಉದ್ದೇಶ



ವೀಣಾ ಹೇಮಂತ್‌ಗೌಡ ಪಾಟೀಲ್

ಅದು 1885 ರ ಕಾಲ ಫಿಲಡಲ್ಫಿಯದಲ್ಲಿ ತೆಗೆದ ಆ ಚಿತ್ರದಲ್ಲಿ ಆ ಮೂರು ಜನ ಮಹಿಳಾ ವೈದ್ಯರು ಪರಸ್ಪರ ಭುಜಕ್ಕೆ ಆತುಕೊಂಡು ಪೋಸು ಕೊಟ್ಟಿದ್ದರು.

ಭಾರತದಿಂದ ವಿದೇಶಕ್ಕೆ ಪ್ರಯಾಣ ಮಾಡಿದ ಭಾರತದ ಮೊಟ್ಟ ಮೊದಲ ಮಹಿಳಾ ವೈದ್ಯೆ ಎಂಬ ಖ್ಯಾತಿಯನ್ನು ತನ್ನದಾಗಿಸಿಕೊಂಡ ಆನಂದಿಬಾಯಿ ಜೋಶಿ ಅವರಲ್ಲಿ ಒಬ್ಬರು. ಯಾವೊಬ್ಬ ತಾಯಿಯೂ ಕೂಡ ಭರಿಸಲಾರದ ಯಾತನೆಯನ್ನು ಆಕೆ ಹೊತ್ತು ದೂರದ ವಿದೇಶಕ್ಕೆ ಪ್ರಯಾಣ ಬೆಳೆಸಿದ್ದಳು. ತನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಹುಟ್ಟಿದ ಪುಟ್ಟ ಮಗುವನ್ನು ಕಂಕುಳಲ್ಲಿ ಹೊತ್ತು ಆಕೆ ಅತ್ಯಂತ ಆರ್ತಳಾಗಿ ವೈದ್ಯಕೀಯ ಚಿಕಿತ್ಸೆಗೆ ಹಾತೊರೆದಿದ್ದಳು... ಆದರೆ ಅಂದಿನ ದಿನಮಾನದಲ್ಲಿ ಹೆಣ್ಣು ಮಕ್ಕಳಿಗೆ ಚಿಕಿತ್ಸೆ ನೀಡಲು ಆಕೆ ವಾಸಿಸುತ್ತಿದ್ದ ಭಾಗದಲ್ಲಿ ಯಾರೂ ತಯಾರಿರಲಿಲ್ಲ. ಹಾಗೆ ತನ್ನ ಮಗುವನ್ನು ಆಕೆ ಕಳೆದುಕೊಂಡದ್ದೆ ಮುಂದೆ ಆಕೆಯ ಬದುಕಿನ ಇಂಧನವಾಗಿ ಪರಿಣಮಿಸಿತು. ತನ್ನ ಪರಿಸ್ಥಿತಿ ಮತ್ತಾವ ಮಹಿಳೆಗೂ ಬರಬಾರದು, ಯಾವೊಬ್ಬ ತಾಯಿಯು ತನ್ನ ಮಗುವಿನ ರಕ್ಷಣೆಗೆ ಕಣ್ಣೀರಿಡಬಾರದು ಎಂಬುದು ಆಕೆಯ ನಿಲುವಾಗಿತ್ತು. ಆ ಕಾರಣಕ್ಕಾಗಿ ಸಮುದ್ರ ದಾಟಿ ವಿದೇಶಕ್ಕೆ ಹೋಗಿ ಶಿಕ್ಷಣ ಪಡೆಯುವ ಆಶಯವನ್ನು ಹೊತ್ತು ಆಕೆ ಫಿಲಡೆಲ್ಫಿಯಾಗೆ ಬಂದಿದ್ದಳು.

ಆಕೆಯ ಪಕ್ಕದಲ್ಲಿ ಇದ್ದ ಇನ್ನೊಬ್ಬಾಕೆ ಒಕಾಮಿ ಎಂಬ ಜಪಾನೀ ಮಹಿಳೆ... ಕೇವಲ ವೈದ್ಯಕೀಯವನ್ನು ಓದುವುದು ಆಕೆಯ ಆಶಯವಾಗಿರಲಿಲ್ಲ ಬದಲಾಗಿ ಹೆಣ್ಣು ಮಕ್ಕಳು ಕೂಡ ಅಷ್ಟೇ ನುರಿತ ಶಸ್ತ್ರಚಿಕಿತ್ಸಕರಾಗಬಲ್ಲರು ಎಂಬುದನ್ನು ಸಿದ್ಧಮಾಡುವ ಆಶಯವನ್ನು ಹೊತ್ತು ಆಕೆ ಅಲ್ಲಿಗೆ ಬಂದಿದ್ದಳು.

ಇವರ ಜೊತೆಗೆ ಇದ್ದಾಕೆ ಸಿರಿಯ ದೇಶದ ಸಭಾತ್ ಇಸ್ಲಾಂ ಬೌಲಿ ತನ್ನ ದೇಶಕ್ಕೆ ಆಧುನಿಕ ವೈದ್ಯಕೀಯ ಜ್ಞಾನವನ್ನು ಹೊತ್ತೊಯ್ಯಲು ಬಂದಾಕೆ.

ಮಹಿಳೆಯರಿಗಾಗಿಯೇ ಪೆನ್ಸಿಲ್ವೇನಿಯದಲ್ಲಿ ಇದ್ದ ವೈದ್ಯಕೀಯ ಕಾಲೇಜು ಅವರ ಯುದ್ಧ ಭೂಮಿಯಾಗಿತ್ತು.... ಕಾರಣ ಅಮೆರಿಕಾದಂತಹ ಮುಂದುವರೆದ ದೇಶದಲ್ಲಿಯೂ ಕೂಡ ಹೆಣ್ಣು ಮಕ್ಕಳು ಅತ್ಯಂತ ಜಾಣ್ಮೆಯನ್ನು ಬಯಸುವ ವೈದ್ಯಕೀಯ ವೃತ್ತಿಯನ್ನು ಓದುವ ಸಾಮರ್ಥ್ಯ ಹೆಣ್ಣು ಮಕ್ಕಳಲ್ಲಿ ಇದೆಯೇ? ಎಂದು ಚರ್ಚಿಸುತ್ತಿದ್ದ ಕಾಲದಲ್ಲಿ ಈ ಮೂರು ಜನ ಹೆಣ್ಣು ಮಕ್ಕಳು ಅಲ್ಲಿಯ ವೈದ್ಯಕೀಯ ಕಾಲೇಜಿನಲ್ಲಿ ಕಾಪಿಟ್ಟ ಶವಗಳನ್ನು ವೈದ್ಯಕೀಯ ವಿಧಾನದಂತೆ ಕತ್ತರಿಸಿ ದೇಹದ ವಿವಿಧ ಭಾಗಗಳನ್ನು ಗುರುತಿಸಲು ಆರಂಭಿಸಿದ್ದರು. ಶಸ್ತ್ರಚಿಕಿತ್ಸೆಯ ಎಲ್ಲ ತಂತ್ರಗಳನ್ನು ಕಲಿಯುತ್ತಲೇ ಕರಗತ ಮಾಡಿಕೊಂಡಿದ್ದರು. ತಮ್ಮ ದೇಶದ ಸಾಂಪ್ರದಾಯಿಕ ಉಡುಪಿನಲ್ಲಿಯೇ ಶರೀರ ರಚನಾ ಶಾಸ್ತ್ರದಲ್ಲಿ ಪಾರಂಗತರಾಗಿದ್ದರು. ಅಲ್ಲಿನ ಉಳಿದ ವಿದ್ಯಾರ್ಥಿಗಳ ಪಾಲಿಗೆ ಅವರು ಪರದೇಶದಿಂದ ಬಂದವರು.... ಅದರಲ್ಲೂ ಮಹಿಳೆಯರಾಗಿ ವೈದ್ಯಕೀಯ ಕಲಿಯಲು ಬಂದವರು ಎಂಬ ಅಸಡ್ಡೆ ಇತ್ತು. ಅವರೆಲ್ಲರ ಮುಂದೆ ಪದವಿ ಪಡೆಯುವುದು ಇವರಿಗೆ ಯಾವುದೇ ವಿಜಯೋತ್ಸವಕ್ಕೆ ಕಡಿಮೆಯಾಗಿರಲಿಲ್ಲ. ಬದಲಾಗಿ ಪದವಿ ಎಂಬುದು ಈ ಮೂರು ಜನ ವೈದ್ಯರಿಗೆ ಮೂರು ವಿಭಿನ್ನ ರೇಖೆಗಳ, ಮೂರು ವಿಭಿನ್ನ ವಿಧಿಗಳ ಹಾದಿಯನ್ನು ತೋರುವ ಆರಂಭಿಕ ಗೆರೆಯಾಗಿತ್ತು.




ಡಾಕ್ಟರ್ ಆನಂದಿಬಾಯಿ ಜೋಶಿಯವರ ಕಥೆ ಕೇಳಿದರೆ ಹೃದಯ ಹಿಂಡಿದಂತಾಗಬಹುದು. ಭಾರತದ ಮೊಟ್ಟ ಮೊದಲ ತಜ್ಞ ವೈದ್ಯರಾಗಿ ಆಕೆ ವಿದೇಶದಿಂದ ತನ್ನ ಬದುಕಿನ ಉದ್ದೇಶವನ್ನು ಪೂರೈಸಲು ಮರಳಿದರು.... ಆದರೆ ವಿಧಿಯ ಆಟವೇ ಬೇರೆಯಾಗಿತ್ತು. ಆಕೆಗೆ ಟಿ ಬಿ ಎಂಬ ಕ್ಷಯದ ಮಾರಿ ಜೊತೆಯಾಗಿತ್ತು. ತನ್ನ ಕನಸನ್ನು ಸಾಕಾರಗೊಳಿಸುವ ವೈದ್ಯಕೀಯ ವೃತ್ತಿಯನ್ನು ಆರಂಭಿಸುವ ಮುನ್ನವೇ ಆಕೆ ತನ್ನ 21ನೇ ವಯಸ್ಸಿನಲ್ಲಿ ತೀವ್ರ ಕ್ಷಯ ರೋಗಕ್ಕೆ ಬಲಿಯಾದಳು.

ಒಕಾಮಿ ತನ್ನ ದೇಶ ಜಪಾನ್ ಗೆ ಮರಳಿದಳು. ತನ್ನ ದೇಶದ ಒಂದಿಡೀ ಹೆರಿಗೆ ಇಲಾಖೆಯನ್ನು ಆಕೆ ಮುನ್ನಡೆಸಿದಳು. ಬದುಕಿನಲ್ಲಿ ತಾನು ಏನಾಗಬೇಕೆಂದು ಬಯಸಿದ್ದಳೋ ಅದನ್ನು ಸಂಪೂರ್ಣವಾಗಿ ಈಡೇರಿಸಿಕೊಳ್ಳಲು ಆಕೆಗೆ ಸಾಧ್ಯವಾಯಿತು.... ಆದರೆ ಜಪಾನ್ ದೇಶದ ಚಕ್ರವರ್ತಿ ಆಕೆಯನ್ನು ಭೇಟಿಯಾಗಲು ನಿರಾಕರಿಸಿದ. ಕಾರಣವೇನು ಗೊತ್ತೆ?... ಆಕೆ ಮಹಿಳೆ ಎಂಬ ಏಕೈಕ ಕಾರಣಕ್ಕೆ ಆತ ಆಕೆಯನ್ನು ಭೇಟಿಯಾಗಲು ಒಪ್ಪಲಿಲ್ಲ. ಆಕೆಯ ವಿರುದ್ಧದ ಎಲ್ಲಾ ಪ್ರತಿಭಟನೆಗಳ ವಿರುದ್ಧ ಆಕೆ ಯಾವುದೇ ರಾಜಿಗೊಳಗಾಗದೆ ತನ್ನ ಆತ್ಮ ಗೌರವವನ್ನು ಕಾಯ್ದುಕೊಂಡಳು.

ಸಿರಿಯಾದ ಇಸ್ಲಾಂ ಬೌಲಿ... ತನ್ನ ಬದುಕಿನದ್ದಕ್ಕೂ ವೈದ್ಯಕೀಯ ಸೇವೆ ಸಲ್ಲಿಸಿದಳು. ಆಟೋಮನ್ ಸಾಮ್ರಾಜ್ಯದ ಎಲ್ಲಾ ಕಡೆ ಆಕೆ ತಿರುಗಾಡಿ ಚಿಕಿತ್ಸೆ ನೀಡಿದಳು. ದಮಾಸ್ಕಸ್ ನಿಂದ ಕೈರೋದವರೆಗೆ ಆಕೆ ಹಲವಾರು ದಶಕಗಳ ಕಾಲ ಜನರ ರೋಗಗಳಿಗೆ ಚಿಕಿತ್ಸೆ ನೀಡುತ್ತಾ ಸಾವಿರಾರು ಜನರನ್ನು ಆರೋಗ್ಯ ಸಮಸ್ಯೆಗಳಿಂದ ಪಾರು ಮಾಡಿದಳು. 1941ರವರೆಗೆ ಆಕೆ ನುರಿತ ತಜ್ಞ ವೈದ್ಯೆಯಾಗಿ ಕಾರ್ಯನಿರ್ವಹಿಸಿದಳು.

ಮೂರು ಜನ ಮಹಿಳೆಯರು, ಮೂರು ವಿಭಿನ್ನ ಖಂಡಗಳು, ಮೂರು ವಿಭಿನ್ನ ಸಾಂಪ್ರದಾಯಿಕ ಹಿನ್ನೆಲೆಯ ಬದುಕಿನ ಯುವತಿಯರು ....ಆದರೆ ಮೂವರ ಉದ್ದೇಶ ಒಂದೇ ಆಗಿತ್ತು. ಆ ಮೂವರನ್ನು ಕೇವಲ ಒಂದು ಫ್ರೇಮ್ ನಲ್ಲಿ ಹಿಡಿದಿಟ್ಟ ಅತ್ಯಂತ ವಿರಳವಾದ ಚಿತ್ರ ಅವರ ಬದುಕಿನ ಕಥೆಯನ್ನು ಹೇಳುತ್ತದೆ... ಆ ಮೂರು ಜನ ಮಹಿಳೆಯರು ಅಸಾಧ್ಯ ಎಂಬುದನ್ನು ಸಾಧಿಸಿ ತೋರಿಸಿದ್ದು ಹೆಣ್ಣು ಮಕ್ಕಳಿಗೆ ಮತದಾನದ ಹಕ್ಕು ನೀಡುವ ಮುನ್ನವೇ, ಹೆಣ್ಣು ಮಕ್ಕಳನ್ನು ಈ ಜಗತ್ತು ನಂಬುವ ಮುನ್ನವೇ ಎಂಬುದು ಅತ್ಯಂತ ಹೆಮ್ಮೆಯ ವಿಷಯ. ಡ್ರೆಕ್ಸೆಲ್ ವಿಶ್ವವಿದ್ಯಾಲಯದವರು ಬಿಡುಗಡೆ ಮಾಡಿದ ಈ ಚಿತ್ರ ಆ ಮೂವರು ಮಹಿಳೆಯರ ಅಸೀಮ ಸಾಧನೆಯ ಹೆಜ್ಜೆ ಗುರುತುಗಳ ದಾಖಲೆಯಾಗಿದೆ ಎಂದರೆ ತಪ್ಪಿಲ್ಲ.

# ಕಾಲದ ಜೊತೆ ಓಡುತ್ತಾ...ಓಡುತ್ತಾ... ನಾವೇ ಕಳೆದೋದ್ವಿ...

ನಮ್ಮ ವಾಸ್ತವ ಜೀವನ......
ಕಾಲದ ಜೊತೆ ಓಡುತ್ತಾ.... ಓಡುತ್ತಾ......



ಡಾ. ಪ್ರಸನ್ನ ನಾಡಿಗರ್

ನಮ್ಮನ್ನ ನಾವೇ ಕಳೆದುಕೊಂಡಿದ್ದೇವೆ. ಕೊನೆಗೆ ಒಂದು ದಿನ ಹಿಂತಿರುಗಿ ನೋಡಿದರೆ ಅರ್ಥವಾಗುತ್ತದೆ ಕಾಲ ಎಲ್ಲೂ ಹೋಗಿಲ್ಲ, ಅದು ಹಾಗೇ ಇದೆ. ಕಳೆದು ಹೋಗಿರುವುದು ನಾವೇ ಎಂದು . ನಾವು ಓಡುತ್ತಿರುವುದು ನಮ್ಮಬದುಕಿಗಾಗಿ ಆದರೆ ಈ ಓಟದಲ್ಲಿ ನಮ್ಮಬದುಕನ್ನ ನಾವು ಮರೆತಿದ್ದೇವೆ.

ನಾವು ಇಲ್ಲಿಯವರೆಗೂ ಬದುಕುತ್ತಿದ್ದೇವೆ ಎಂದುಕೊಂಡಿದ್ದೆವು, ಆದರೆ ವಿಪರ್ಯಾಸವೇನೆಂದರೆ ನಿಜವಾಗಿಯೂ ನಾವು ಬದುಕನ್ನು ಮುಂದೂಡುತ್ತಿದ್ದೆವು ಅಷ್ಟೇ...ಇದೆ ಸತ್ಯ .

ಹಿಂದಿನ ಕಾಲದಲ್ಲಿ ಬೆಳಿಗ್ಗೆ ಎದ್ದರೆ ಸೂರ್ಯನ ಬೆಳಕು, ಹಕ್ಕಿಗಳ ಚಿಲಿಪಿಲಿ ಕಲರವ, ಅಮ್ಮನ ಕಾಫಿಯ ಪರಿಮಳ, ದೇವರ ನಾಮಾವಳಿ, ಪೂಜೆಯ ಸದ್ದು ಆದರೆ ಇಂದಿನ ದಿನಗಳಲ್ಲಿ ಬೆಳಿಗ್ಗೆ ಎದ್ದರೆ ಅಲಾರಾಂ ಕಿರಿಕಿರಿ ಸದ್ದು. ಕಣ್ಣು ಬಿಡುವ ಮೊದಲೇ ನಮ್ಮ ಕೈ ಮೊಬೈಲ್ ಹುಡುಕುತ್ತದೆ. ಎಷ್ಟು ಮೆಸೇಜ್ ಬಂದಿದೆ, ಯಾರು ಏನು ಸ್ಟೇಟಸ್ ಹಾಕಿದ್ದಾರೆ. ನಾವು ಎದ್ದಿದ್ದು ನಮ್ಮ ದಿನವನ್ನು ನೋಡಲು ಅಲ್ಲ ಬೇರೆಯವರ ದಿನ ಹೇಗಿದೆ ಎಂದು ನೋಡಲು. ನಾವು ಬ್ರಷ್ ಮಾಡುವಾಗಲೂ ತಲೆಯಲ್ಲಿ ಕೆಲಸದ ಚಿಂತೆ. ತಿಂಡಿ ತಿನ್ನುವಾಗಲೂ ಟೆನ್ಶನ್.ತಿಂಡಿ ತಿನ್ನುತ್ತೇವೆ ಆದರೆ ರುಚಿನೇ ಗೊತ್ತಾಗೋದಿಲ್ಲ. ನಾವು ನೋಡುತ್ತೇವೆ ಆದರೆ ಏನನ್ನು ಗಮನಿಸುವುದೇ.... ಇಲ್ಲ ಈ ರೀತಿ ಪ್ರತಿದಿನ ನಮ್ಮ ಜೀವನದ ಈ ಓಟ ಶುರುವಾಗುತ್ತದೆ ....

ಈ ಜೀವನದ ಓಟದಲ್ಲಿ ಒಂದು ಪ್ರಶ್ನೆ ಸಹಜವಾಗಿ ಮೂಡುತ್ತದೆ ನಾವು ಕಾಲದ ಜೊತೆ ಓಡುತ್ತಾ ಏನನ್ನ ಗಳಿಸಿದೆವು....? ಎಂಬುದು ಇದು ನಮಗೆ ಯಕ್ಷ ಪ್ರಶ್ನೆಯಾಗುತ್ತದೆ. ಇಂದು ಒಳ್ಳೆಯ ಸಂಬಳ, ದೊಡ್ಡ ಮನೆ, ದುಬಾರಿ ಕಾರು, ಮೊಬೈಲ್ ಎಲ್ಲವೂ ಇದೆ. ಆದರೆ ಏಕೋ...ಒಂದು ಖಾಲಿತನ ಮತ್ತೆ ಬೇಜಾರು . ರಾತ್ರಿ ಮಲಗಿದಾಗ ಒಂದು ಪ್ರಶ್ನೆ ಕಾಡುತಿರುತ್ತದೆ. ನಾನು ಖುಷಿಯಾಗಿದ್ದೀನಾ...? ಇದಕ್ಕೆ ಉತ್ತರ ಸಿಗುವುದೇ ಇಲ್ಲ... ಹಾಗಾದರೆ ಕಳೆದುಕೊಂಡಿದ್ದಾದರೂ ಏನು..? ಎನ್ನುವ ಪ್ರಶ್ನೆ ಮೂಡುತ್ತದೆ.ಆದರೆ ನಮಗೆ ಇಲ್ಲಿಯವರೆಗು ಏನೂ ಕಳೆದು ಕೊಂಡಿದ್ದೇವೆ ಎಂಬದು ಗೊತ್ತೇ ಇಲ್ಲ. ಹಾಗಾದರೆ ನಾವು ಕಳೆದುಕೊಂಡಿದ್ದರು ಏನು ಎಂಬುದು ನೋಡುವುದಾದರೆ ನೆಮ್ಮದಿಯ ನಿದ್ದೆ, ಮನಸಾರೆ ನಗುವುದು, ಸ್ನೇಹಿತರ ಜೊತೆ ಹರಟೆ ಹೊಡೆಯುವುದು, ಮಳೆ ಬಂದಾಗ ಖುಷಿ ಪಡುವುದು, ಸಂಭ್ರಮದ ಹಬ್ಬ, ನಲಿವಿನ ಆಟಗಳು.. ಹಿಗೆ ನಮ್ಮ ಜೀವನದ ಸಣ್ಣ ಸಣ್ಣ ಖುಷಿಗಳನ್ನೇ ನಾವು ಕಳೆದುಕೊಂದಿದ್ದೇವೆ.. ಖುಷಿ, ಶಾಂತಿ, ನೆಮ್ಮದಿಯೇ ಜೀವನ ಎಂಬುದನ್ನು ಮರೆತುಬಿಟ್ಟಿದ್ದೇವೆ.




ಸ್ನೇಹಿತರೆ, ಒಂದು ಕ್ಷಣ ನಿಂತು ಯೋಚಿಸಿ. ಕೊನೆಯ ಬಾರಿ ನಾವು ಯಾವಾಗ ಮನಸಾರೆ ಯಾವುದೇ ಚಿಂತೆ ಇಲ್ಲದೆ ನಕ್ಕಿದ್ದೀವಿ...?ಕೊನೆಯ ಬಾರಿ ಯಾವಾಗ ಮೊಬೈಲ್ ಇಲ್ಲದೆ ಕೇವಲ ಕುಟುಂಬದ ಜೊತೆ ಒಂದು ಸಂಜೆಯನ್ನು ಕಳೆದಿದ್ದೀವಿ..? ಕೊನೆಯ ಬಾರಿ ಯಾವಾಗ ನಾವು ನಮಗಾಗಿ ಸ್ವಲ್ಪ ಸಮಯ ಕೊಟ್ಟಿದ್ದೀವಿ..? ಎಂದು ಉತ್ತರ ಹುಡುಕಲು ಕಷ್ಟವಾಗುತ್ತದೆ. ಉತ್ತರ ನೆನಪಿಗೆ ಬರುವುದೇ ಇಲ್ಲ. ಏಕೆಂದರೆ ಬೇರೆಯವರನ್ನು ಮೆಚ್ಚಿಸುವ ಭರದಲ್ಲಿ ನಮ್ಮನ್ನ ನಾವೇ ಕಳೆದುಕೊಂಡಿದ್ದೇವೆ . ಇಲ್ಲಿಯವರೆಗೂ ನಾವು ನೀವು ಮಾಡಿರುವ ಜೀವನವೆಂದರೆ ಬೇರೆಯವರನ್ನ ಮೆಚ್ಚಿಸುವುದು. ಬೇರೆಯವರು ಏನನ್ನುತ್ತಾರೆ ಎನ್ನುವ ಅಂಜಿಕೆಯಲ್ಲಿ ಜೀವನ ನಡೆಸಿರುವುದು ಇಷ್ಟೇ ನಾವು ಮಾಡಿರುವುದು .

ನಿಜವಾದ ದುರಂತ ಏನು ಗೊತ್ತಾ....? ನಾವು ಜಗತ್ತಿನ ಮೂಲೆ ಮೂಲೆಯ ಜನರ ಜೊತೆ ಆನ್ಲೈನ್ ನಲ್ಲಿ ಕನೆಕ್ಟ್ ಆಗಿದ್ದೇವೆ.ಆದರೆ ಮನೆಯಲ್ಲಿರುವ ತಂದೆ ತಾಯಿ, ಅಜ್ಜ–ಅಜ್ಜಿ, ಅಕ್ಕ ತಂಗಿ, ಅಣ್ಣ ತಮ್ಮ, ನಮ್ಮ ಸಂಬಂಧಗಳ ಜೊತೆ ಮಾತನಾಡಲು ನಮಗೆ ಸಮಯವಿಲ್ಲ. ವಾಟ್ಸಪ್ ನಲ್ಲಿ ಸಾವಿರ ಸ್ನೇಹಿತರು ಆದರೆ ಕಷ್ಟ ಸುಖ ಹಂಚಿಕೊಳ್ಳಲು ರಾತ್ರಿ ದುಃಖವಾದಾಗ ಅಳಲು ಒಬ್ಬ ಸ್ನೇಹಿತರು ಇಲ್ಲ...ಎಂಥ ದುರಂತ ಅಲ್ವಾ...

ಇಂದು ನಾವು ಆಧುನಿಕ ಯುಗದಲ್ಲಿದ್ದೇವೆ. ಪ್ರಪಂಚವನ್ನು ಸುತ್ತುತ್ತೇವೆ. ಅಲ್ಲಿ ಫೋಟೋ, ವಿಡಿಯೋ ತೆಗೆಯುತ್ತೇವೆ. ಆದರೆ ಆ ಕ್ಷಣವನ್ನು ನಾವು ಅನುಭವಿಸುವುದಿಲ್ಲ. ಒಂದು ಸುಂದರ ಜಾಗಕ್ಕೆ ಹೋದರೆ ಮೊದಲುನಾವು ಮಾಡುವ ಕೆಲಸ ಫೋಟೋ, ನಂತರ ಸ್ಟೇಟಸ್, ಇದನ್ನು ಮಾಡಿದರೆ ಸಾರ್ಥಕ ಅಂದುಕೊಂಡಿದ್ದೇವೆ ಆದರೆ ನಿಜ ಸಂಗತಿ ಏನೆಂದರೆ ಇಂದು ನಾವು ಕಣ್ಣಾರೆ ನೋಡಿ ಅನುಭವಿಸುವುದನ್ನು ಮತ್ತು ಅಲ್ಲಿರುವ ಖುಷಿ ಸಂತೋಷವನ್ನು ಮರೆತಿದ್ದೇವೆ. ಇಂದು ನಾವು ನೆನಪುಗಳನ್ನ ಮಾಡುತ್ತಿಲ್ಲ ಬದಲಿಗೆ ಸ್ಟೋರೇಜ್ ತುಂಬಿಸುತ್ತೇವೆ ಅಷ್ಟೇ... ಇದುವೆ ನಮ್ಮ ಈ ಕಾಲದ ಜೀವನ ಆಗಿದೆ...

**ನಾವು ಪ್ರತಿನಿತ್ಯ**

ರಸ್ತೆಯಲ್ಲಿ ಸಾವಿರಾರು ಜನರನ್ನು ದಾಟಿ ಹೋಗುತ್ತೇವೆ, ಆದರೆ ಒಬ್ಬರ ಮುಖವನ್ನೂ ನೆನಪಿಟ್ಟುಕೊಳ್ಳುವುದಿಲ್ಲ.

ನಾವು ಜನರ ಮಧ್ಯದಲ್ಲೇ ಇರುತ್ತೇವೆ. ಅವರೊಂದಿಗೆ ಕೆಲಸ ಮಾಡುತ್ತೇವೆ ಆದರೂ ನಮ್ಮಲ್ಲಿ ಒಂಟಿತನ.

ಮನೆಯಲ್ಲೇ ನಾಲ್ಕು ಜನ ಇದ್ದೇವೆ, ಆದರೆ ನಾಲ್ಕು ಜನ ಮೊಬೈಲ್ ನೋಡುತ್ತಾ ಕುಳಿತಿರುತ್ತೇವೆ. ಇಂದು ಮಾತನಾಡುವುದು ಕಡಿಮೆ ಆಗಿದೆ, ಟೈಪ್ ಮಾಡುವುದು ಹೆಚ್ಚಾಗಿದೆ. ನಾವೆಲ್ಲರೂ ಇಂದು... ಕಾಲದ ಜೊತೆ ಓಡುತ್ತಾ

ನಮ್ಮನ್ನು ನಾವು ಮರೆತಿದ್ದೇವೆ.

ಇನ್ನು ಮುಂದೆ ನಾವು ಏನು ಮಾಡಬೇಕು?

**ನಾವು ಸ್ವಲ್ಪ ನಿಲ್ಲೋಣ..**

ಕಾಲವನ್ನು ನಿಲ್ಲಿಸಲು ಆಗುವುದಿಲ್ಲ. ಇದು ನಮಗೆಲ್ಲ ಗೊತ್ತಿರುವ ಸತ್ಯ . ಆದರೆ ನಮ್ಮನ್ನು ನಾವು ಹುಡುಕಿಕೊಳ್ಳಲು ಆಗುತ್ತದೆ ಅಲ್ಲವೇ ಹಾಗಾದರೆ ಹೀಗೆ ಮಾಡೋಣ......

1. ಬೆಳಿಗ್ಗೆ ಎದ್ದು ತಕ್ಷಣ ಮೊಬೈಲ್ ಮುಟ್ಟೋದು ಬೇಡ. ಹೊರಗೆ ಬಂದು ಒಳ್ಳೆಯ ಗಾಳಿ ಸುಂದರ ಪ್ರಕೃತಿಯನ್ನು ನೋಡೋಣ. ಅದರ ಸೌಂದರ್ಯವನ್ನು ಸವಿಯೋಣ.
2. ದಿನದಲ್ಲಿ ಒಂದು ಊಟವನ್ನಾದರೂ ಟಿ.ವಿ. ಮೊಬೈಲ್ ಇಲ್ಲದೇ ಮಾಡೋಣ ರುಚಿಯನ್ನ ಅನುಭವಿಸಿ ತಿನ್ನೋಣ.
3. ಸಂಜೆ ಮನೆಗೆ ಬಂದಾಗ ಅರ್ಧ ಗಂಟೆ ಎಲ್ಲವನ್ನು ಆಫ್ ಮಾಡಿ ನಮ್ಮವರ ಜೊತೆ ಮಾತನಾಡೋಣ.
4. ವಾರಕ್ಕೆ ಒಂದು ಸಂಜೆ ನಮಗಾಗಿ ಇಟ್ಟುಕೊಳ್ಳೋಣ. ಇಷ್ಟದ ಹಾಡು ಕೇಳೋಣ. ಹಳೆಯ ಆಲ್ಬಮ್ ತೆಗೆದು ನೋಡೋಣ. ಸುಮ್ಮನೆ ಕುಳಿತುಕೊಳ್ಳೋಣ. ಇಷ್ಟವಾದ ಪುಸ್ತಕ ಓದೋಣ.
5 ಸಣ್ಣ ಸಣ್ಣ ಖುಷಿಗಳನ್ನು ಅನುಭವಿಸೋಣ. ಮಕ್ಕಳ ಜೊತೆ ಆಟ ಆಡೋಣ .ನಮ್ಮ ಹಳೆಯ ಸಂತೋಷಗಳನ್ನು ನೆನಪು ಮಾಡಿಕೊಳ್ಳೋಣ.

**ಕೊನೆಯದಾಗಿ**

ನೆನಪಿಡಿ, ಜೀವನ ಎಂದರೆ ದೊಡ್ಡ ಗುರಿ ತಲುಪುವುದು ಮಾತ್ರವಲ್ಲ. ಗುರಿಯತ್ತ ಹೋಗುವ ದಾರಿಯಲ್ಲಿ ಸಿಗುವ ಸಣ್ಣ ಸಣ್ಣ ಕ್ಷಣಗಳನ್ನು ಸಂತೋಷ, ಖುಷಿಗಳ್ಳನ್ನು ಅನುಭವಿಸುತ್ತ ಬದುಕುವುದು.

ಕಾಲದ ಜೊತೆ ಓಡುವುದು ಅನಿವಾರ್ಯ. ಆದರೆ ಓಡುವಾಗ ನಮ್ಮನ್ನು ನಾವೇ ಕಳೆದುಕೊಳ್ಳಬಾರದು.

ಇಲ್ಲದಿದ್ದರೆ ಕೊನೆಗೆ ನಮ್ಮ ಕಥೆ ಹೀಗೆ ಮುಗಿಯುತ್ತದೆ ಎಲ್ಲವನ್ನೂ ಗಳಿಸಿದೆ, ಆದರೆ ನನ್ನನ್ನೇ ನಾನು ಕಳೆದುಕೊಂಡೆ ಎಂದು. ನಾವು ಈ ಕಾಲದ ಜೊತೆ ಓಟದಲ್ಲಿ ಗೆದ್ದರೂ... ಸೋಲು ನಮ್ಮದೇ. ಏಕೆಂದರೆ ಓಟ ಮುಗಿದಾಗ ನಮ್ಮ ಜೊತೆ ನಾವೇ ಇರುವುದಿಲ್ಲ......

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,